ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಂ. ನಾಗಪ್ರಸನ್ನ

ಎ.ಕೆ. ಸಿದ್ದಲಿಂಗಪ್ಪ ವಿರುದ್ಧ ಸಿಂಡಿಕೇಟ್ ಬ್ಯಾಂಕ್

ರಿಟ್ ಅರ್ಜಿಸಂಖ್ಯೆ: 47769/2015 (ಎಸ್-ಆರ್ಇಎಸ್), ದಿನಾಂಕ 26 ನೇ ಫೆಬ್ರುವರಿ, 2021.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಂ. ನಾಗಪ್ರಸನ್ನ:

"ನನ್ನ ಕಣ್ಣೆ ನನ್ನ ಕಿವಿ; ನನ್ನ ಕೈ ನನ್ನ ಬಾಯಿ, ಪ್ರತಿವಾದದ ಸೂಕ್ತ ಅವಕಾಶವನ್ನು ನೀಡದೆ ದಂಡವನ್ನು ವಿಧಿಸಿದ ಬ್ಯಾಂಕಿನ ಕ್ರಮವನ್ನು ಪ್ರಶ್ನಿಸಿ, ಶೇಕಡ 98 ರಷ್ಟು ಶ್ರವಣ ದೋಷ ಹೊಂದಿರುವ ಅರ್ಜಿದಾರನ ವ್ಯಥೆ."

2. ವಾದಪತ್ರುಗಳಿಂದ ತಿಳಿದುಬಂದಿರುವಂತೆ ಅರ್ಜಿಯ ಸಲ್ಲಿಕೆಗೆ ಎಡೆ ಮಾಡಿಕೊಟ್ಟ ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಹೀಗಿವೆ: ಅರ್ಜಿದಾರನುದಿನಾಂಕ: 25.10.1976 ರಂದು ಗುಮಾಸ್ತನಾಗಿ, ಭಾರತ ಸಂವಿಧಾನದ 12 ನೇ ಅನುಚ್ಛೇದದ ಅಡಿಯಲ್ಲಿ ಪ್ರತ್ಯರ್ಜಿದಾರ-ಸಿಂಡಿಕೇಟ್ ಬ್ಯಾಂಕ್ನ (ಇಲ್ಲಿ ಇನ್ನು ಮುಂದೆ 'ಬ್ಯಾಂಕ್' ಎಂದು ಉಲ್ಲೇಖಿಸಲಾಗುವುದು), 'ರಾಜ್ಯ'ದ ಸೇವೆಗೆ ಸೇರಿದ್ದಾನೆ.ಸುಸಂಗತ ಸಮಯದಲ್ಲಿ, ಅರ್ಜಿದಾರನು ಮಧ್ಯಮ ವ್ಯವಸ್ಥಾಪನಾ ದರ್ಜೆ ಶ್ರೇಣಿ -II ರಲ್ಲಿನ ವೃಂದವಾದ ವ್ಯವಸ್ಥಾಪಕ ಹುದ್ದೆಯಲ್ಲಿ ಕಾರನಿರ್ವಹಿಸುತ್ತಿದ್ದನು.

3. ಅರ್ಜಿದಾರನು ಬ್ಯಾಂಕಿನ ಲೇಖನ-ಸಾಮಗ್ರಿ ಶಾಖೆಯ ಪ್ರಭಾರಿ ವ್ಯವಸ್ಥಾಪಕನಾಗಿ ಕಾರನಿರ್ವಹಿಸುತ್ತಿದ್ದಾಗ,ದಿನಾಂಕ: 22.12.2010 ರಂದು ಹುದ್ದೆಯ ಪ್ರಭಾರ ವಹಿಸಿಕೊಂಡಿದ್ದನು.ಅರ್ಹ ಏಜೆನ್ಸಿಗಳಿಂದ ಬಿಡ್ಡಳನ್ನು ಕರೆಯಲು ನೋಟೀಸ್ ಹೊರಡಿಸುವ ಸಂಬಂಧದಲ್ಲಿ, ಅರ್ಜಿದಾರನುದಿನಾಂಕ: 01.03.2011 ರಂದು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಕೋರಿದ್ದನು.ಸದರಿ ನೋಟೀಸಿಗೆ ಪ್ರತಿಯಾಗಿ ನಾಲ್ಕು ಏಜೆನ್ಸಿಗಳು ಅರ್ಜಿ ಸಲ್ಲಿಸಿದ್ದವು.ದಿನಾಂಕ: 10.03.2011 ರಂದು, ಅರ್ಜಿದಾರನು ಸದರಿ ಬಿಡ್‌ಅನ್ನು ಹೇಗೆ ಕಾವ್ಯಗತಗೊಳಿಸಬೇಕೆಂಬ ಬಗ್ಗೆ ಸವಿವರವಾದ ಕಚೇರಿ ಟಿಪ್ಪಣಿಯೊಂದಿಗೆ ಕನಿಷ್ಠ ಬಿಡೋದಾರ-ಎಲ್ 1 ಪರವಾಗಿ ಗುತ್ತಿಗೆ ನೀಡಿದ್ದನು.

4. ಒಂದು ವರ್ಷದ ತರುವಾಯ,ದಿನಾಂಕ: 10.03.2011 ರಲ್ಲಿ ಬಿಡ್ ಗುತ್ತಿಗೆ ಪ್ರಕ್ರಿಯೆಯಲ್ಲಿನ ಕೆಲವು ಅಕ್ರಮಗಳಿಗೆ ಸಂಬಂಧಿಸಿದಂತೆ ಅರ್ಜಿದಾರನ ವಿರುದ್ಧ ಏಕೆ ವ್ಯವಹರಣೆಗಳನ್ನು ಪ್ರಾರಂಭಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಕೇಳಿ,ದಿನಾಂಕ: 30.03.2012 ರಂದು ಆತನಿಗೆ ಕಾರಣ ತೋರಿಸುವ ನೋಟೀಸನ್ನು ನೀಡಲಾಗಿತ್ತು.ಸಮಯಾವಕಾಶ ಕೋರಿ ಅರ್ಜಿದಾರನು ಕಾರಣ ತೋರಿಸುವ ನೋಟೀಸಿಗೆ ಸವಿವರವಾದ ಉತ್ತರವನ್ನು ನೀಡಿದ್ದನಲ್ಲದೆ, ಕಾರಣ ತೋರಿಸುವ ನೋಟೀಸಿಗೆ ತನ್ನ ವಾದವನ್ನು ಸಿದ್ಧಪಡಿಸಲು ಕೆಲವು ದಸ್ತಾವೇಜುಗಳನ್ನು ತನಗೆ ನೀಡಬೇಕೆಂದು ಬೇಡಿಕೆ ಇಟ್ಟಿದ್ದನು.ಸದರಿ ಉತ್ತರಕ್ಕೆ ಬ್ಯಾಂಕು ಸಮ್ಮತಿಸದೆ,ದಿನಾಂಕ: 01.06.2012 ರಂದು ಅರ್ಜಿದಾರನ ವಿರುದ್ಧ ಆರೋಪ ಪಟ್ಟಿಯನ್ನು ನೀಡಿ, ವಿಚಾರಣಾ ವ್ಯವಹರಣೆಗಳನ್ನು ಪ್ರಾರಂಭಿಸಿತು.ನಂತರ ಅರ್ಜಿದಾರನು, ತಾನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿರುವ ಸಂಗತಿ ಕುರಿತು ಬ್ಯಾಂಕಿಗೆ ಗೊತ್ತಿರುವ ಬಗ್ಗೆ ಬ್ಯಾಂಕಿಗೆ ತಿಳಿಸಿ, ವಿಚಾರಣೆಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ಕಾನೂನು ನೆರವು ಕೋರಿದ್ದನು.ಅರ್ಜಿದಾರನಿಗೆ ಅಸಮರ್ಥತೆ ಇದ್ದರೂ, ಕಾನೂನು ಪ್ರತಿನಿಧಿಯನ್ನು ಗೊತ್ತುಪಡಿಸಿಕೊಳ್ಳುವ ಅರ್ಜಿದಾರನ ಮನವಿಗೆ ಬ್ಯಾಂಕು ಸಮ್ಮತಿಸದಿದ್ದಾಗ, ಅರ್ಜಿದಾರನು ರಿಟ್ ಅರ್ಜಿಸಂಖ್ಯೆ: 44341/2012 ರಲ್ಲಿ ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದನು, ಸದರಿ ಅರ್ಜಿಯನ್ನುದಿನಾಂಕ: 21.10.2013 ರ ಆದೇಶದ ಮೂಲಕ ವಜಾಗೊಳಿಸಲಾಗಿತ್ತು.

5. ರಿಟ್ ಅರ್ಜಿಯನ್ನು ವಜಾಗೊಳಿಸಿದ ನಂತರ, ಅರ್ಜಿದಾರನು ಅಪೀಲು ಹೂಡಲು ಸಾಧ್ಯವಾಗುವಂತಾಗಲು, ಸದರಿ ರಿಟ್ ಅರ್ಜಿಯಲ್ಲಿನ ಪ್ರಮಾಣೀಕೃತ ಆದೇಶದ ಪ್ರತಿಯನ್ನು ಸ್ವೀಕರಿಸುವವರೆಗೆ ಕಾಯುವಂತೆ ಬ್ಯಾಂಕನ್ನು ಕೋರಿದ್ದನು.ರಿಟ್ ಅರ್ಜಿಸಂಖ್ಯೆ: 44341/2012 ರಲ್ಲಿನ ಆದೇಶದ ಪ್ರಮಾಣೀಕೃತ ಪ್ರತಿಯನ್ನು

ಸ್ವೀಕರಿಸುವುದಕ್ಕೆ ಕಾಯದೆ, ವಿಷಯವನ್ನು ಪಾಟಿ-ಸವಾಲಿಗಾಗಿ ಕಳುಹಿಸಲಾಯಿತು ಮತ್ತು ವಿಚಾರಣೆ ಮುಗಿದ ನಂತರ, ಅರ್ಜಿದಾರನು ಆರೋಪಗಳ ಅಪರಾಧಿಯೆಂಬುದು ಕಂಡುಬಂದಿತು.ಶಿಸ್ತು ಪ್ರಾಧಿಕಾರವುದಿನಾಂಕ: 31.01.2014 ರಂದು, ಅರ್ಜಿದಾರನನ್ನು ಎಂಎಂಜಿಎಸ್-II ಶ್ರೇಣಿಯಿಂದ ಜೆಎಂಜಿಎಸ್-ಶ್ರೇಣಿಗೆ ಮೊದಲಿನ ಹುದ್ದೆಗೆ ಹಿಂಬಡ್ತಿ ನೀಡುವ ದಂಡವನ್ನು ವಿಧಿಸಿ ಮತ್ತು ಆತನ ವೇತನವನ್ನು 20,100/ ರೂ.ಗಳಿಗೆ ನಿಗದಿಪಡಿಸಿ ಆದೇಶವನ್ನು ಹೊರಡಿಸಿತು.ಅರ್ಜಿದಾರನು ಅಪೀಲು ಪ್ರಾಧಿಕಾರದ ಮುಂದೆದಿನಾಂಕ: 04.09.2014 ರ ಆದೇಶದ ಮೂಲಕ ವಜಾಗೊಳಿಸಬೇಕೆಂದು ಮಾತ್ರವೇ ಅಪೀಲು ಸಲ್ಲಿಸಿದ್ದಾನೆ.ಶಿಸ್ತು ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರಗಳೆರಡರ ಆದೇಶಗಳಿಂದ ಬಾಧಿತನಾಗಿ, ಅರ್ಜಿದಾರನು ಪುನರ್ಪರಿಶೀಲನಾ ಪ್ರಾಧಿಕಾರದ ಮುಂದೆ ಪುನರವಲೋಕನಾ ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ಸಹದಿನಾಂಕ: 19.11.2014 ರ ಆದೇಶದ ಮೂಲಕ ವಜಾಗೊಳಿಸಲಾಯಿತು.ಈ ಆದೇಶಗಳನ್ನೇ ಅರ್ಜಿದಾರನು ಈ ರಿಟ್ ಅರ್ಜಿಯ ಮೂಲಕ ಪ್ರಶ್ನಿಸಿದ್ದಾನೆ.

6. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿ ಶ್ರೀ ಕಿರಣ್ ವಿ. ರೋಣ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಸೈಯದ್ ಕಾಸಿಫ್ ಅಲಿ ಅವರ ವಾದ-ಪ್ರತಿವಾದಗಳನ್ನು ಆಲಿಸಲಾಗಿದೆ.

7. ಅರ್ಜಿದಾರನನ್ನು ಪ್ರತಿನಿಧಿ ಸುವ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ಅರ್ಜಿದಾರನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿದ್ದನೆಂಬುದರ ಬಗ್ಗೆ ಬ್ಯಾಂಕಿಗೆ ಸಂಪೂರ್ಣವಾಗಿ ಅರಿವಿದ್ದೂ, ಅರ್ಜಿದಾರನನ್ನು ಸಾಮಾನ್ಯ ನೌಕರನೆಂಬಂತೆ ಪರಿಗಣಿಸಿ, ಅವನಿಗೆ ಕಾನೂನು ನೆರವು ಮತ್ತು ಪ್ರತಿವಾದದ ನೆರವುಗಳೆರಡನ್ನು ನಿರಾಕರಿಸಿದೆ ಮತ್ತು ಅರ್ಜಿದಾರನನ್ನು, ತನ್ನ ವಾದವನ್ನು ತಾನೇ ಸಮರ್ಥಿಸಿಕೊಳ್ಳುವಂತೆ ಮಾಡಿರುವುದು, ಕಾನೂನು ಪ್ರಕ್ರಿಯೆಯ ಉಲ್ಲಂಘನೆಯಾಗಿದೆ ಮತ್ತು ಸ್ಪಷ್ಟವಾಗಿ ಕಾನೂನಿಗೆ ವಿರುದ್ಧವಾದುದಾಗಿದೆ.

8. ಮುಂದುವರಿದು ಅವರು ವಾದಿಸಿರುವುದೇನೆಂದರೆ, ಪ್ರತ್ಯರ್ಜಿದಾರ-ಬ್ಯಾಂಕ್ನ ಉದ್ದೇಶ ಅರ್ಜಿದಾರನನ್ನು ದಂಡಿಸುವುದು ಮಾತ್ರವಾಗಿತ್ತು ಮತ್ತು ಆತನ ಈ ವಾದವನ್ನು ವಿಚಾರಣೆಯ ವ್ಯವಹರಣೆಯಿಂದ ಪಡೆಯಬಹುದಾಗಿತ್ತು.ಅವರು ನಿವೇದಿಸಿಕೊಂಡಿರುವುದೇನೆ ಂ ದರೆ, ಅರ್ಜಿದಾರನು ಬಹಳ ಹಿ ಂ ದೆಯೇ ನಿವೃತ್ತನಾಗಿದ್ದರೂ, ಅವನಿಗೆ ಪೂರ್ಣ ಪಿಂಚಣಿಯನ್ನು ನಿರಾಕರಿಸಲಾಗಿದೆ.ಅವರು ಈ ವಾದಕ್ಕಾಗಿ, ರವೀಂದ್ರನ್ ವಿರುದ್ಧ-ಶೋಭನ ಮತ್ತು ಇನ್ನೊಬ್ಬರು 1 ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯದ ಮಾನ್ಯ ವಿಭಾಗೀಯ ಪೀಠದ ಈ ಮುಂದಿನ ತೀರ್ಪನ್ನು ಅವಲಂಬಿಸಿದ್ದಾರೆ.

9. ಇನ್ನೊಂದೆಡೆ, ಬ್ಯಾಂಕಿನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಬ್ಯಾಂಕಿನ ವಿನಿಯಮಗಳು, ಕಾನೂನು ವೃತ್ತಿ ನಡೆಸುವವರನ್ನು ಅರ್ಜಿದಾರನ ಪ್ರತಿವಾದಿಸುವ ಪ್ರತಿನಿಧಿಯನ್ನಾಗಿ ತೊಡಗಿಸಿಕೊಳ್ಳಲು ಅನುಮತಿ ನೀಡುವುದಿಲ್ಲ ಮತ್ತು ಅರ್ಜಿದಾರನು ತನ್ನ ಯಾರೇ ಸಹ-ಅಧಿಕಾರಿಯನ್ನು ತನ್ನ ಪ್ರತಿವಾದಿಸುವ ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿಕೊಳ್ಳಲು ಮುಕ್ತನಿದ್ದನು ಎಂದು ನಿವೇದಿಸಿಕೊಂಡಿದ್ದಾರೆ.ವಿಚಾರಣೆಯಲ್ಲಿ ಪ್ರತಿವಾದಿಸಲು ಯಾರೇ ಅಧಿಕಾರಿ ಮುಂದೆ ಬರದಿದ್ದರೆ, ಪ್ರತಿವಾದಿಸುವ ಪ್ರತಿನಿಧಿಯನ್ನು ಒದಗಿಸದಿರುವ ಹೊರೆಯನ್ನು ಪ್ರತ್ಯರ್ಜಿದಾರರಿಗೆ ವರ್ಗಾಯಿಸಲಾಗುವುದಿಲ್ಲ.ಮಾನ್ಯ ನ್ಯಾಯವಾದಿಯು ವಾದಿಸಿರುವುದೇನೆಂದರೆ, ಅಸಮರ್ಥತೆ ಇರಲಿ ಅಥವಾ ಬೇರೆ ಏನೇ ಇರಲಿ, ಟೆಂಡರ್ ಕರೆಯುವ ಮಾನದಂಡಗಳನ್ನು ಅರ್ಜಿದಾರನು ಪಾಲಿಸಬೇಕಿತ್ತು, ಒಪ್ಪಿಕೊಂಡಿರುವಂತೆ ಅರ್ಜಿದಾರನು ಹಾಗೆ ಮಾಡುವುದನ್ನು ಉಲ್ಲಂಘಿಸಿದ್ದಾನೆ ಹಾಗೂ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನವಲಂಬಿಸಿದ್ದಾರೆ:

ಎ. ಬ್ಯಾಂಕ್ ಆಫ್ ಇಂಡಿಯಾ ವಿರುದ್ಧ-ಅಪೂರ್ಬ ಕುಮಾರ್ ಷಹಾ [2]

ಬಿ. ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ-ಪಿ.ಗುಣಶೇಖರನ್;

ಸಿ. ಚಂದ್ರಮ ತಿವಾರಿ -ವಿರುದ್ಧ ಭಾರತ ಒಕ್ಕೂಟ, ಮತ್ತು

ಡಿ. ಸಿಂಡಿಕೇಟ್ ಬ್ಯಾಂಕ್ ಮತ್ತು ಇತರರು -ವಿರುದ್ಧ-ವೆಂಕಟೇಶ್ ಗುರುಗಾಂವ್ ಕುರತಿ.

10. ಸಂಬಂಧಪಟ್ಟ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿಕೊಂಡ ನಿವೇದನೆಗಳನ್ನು ನಾನು ಕಾಳಜಿಯಿಂದ ಪರಿಗಣಿಸಿದ್ದೇನೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಅವಲೋಕಿಸಿದ್ದೇನೆ ಹಾಗೂ ಅದರ ಮುಂದುವರಿಕೆಯಾಗಿ, ನನ್ನ ಪದ್ಯಾಲೋಚನೆಗೆ ಉದ್ಭವಿಸಿದಂಥ ಅಂಶವೆಂದರೆ:

ಅರ್ಜಿದಾರನ ವಿರುದ್ಧ ನಡೆಸಲಾದ ಶಿಸ್ತು ವ್ಯವಹರಣೆಗಳಲ್ಲಿ ಪ್ರತಿವಾದದ ಯುಕ್ತ ಅವಕಾಶವನ್ನು ಆತನು ಹೊಂದಿದ್ದನೇ ಮತ್ತು ಅದರ ನಿರಾಕರಣೆಯಿಂದಾಗಿ, ಅಂತಿಮ ದಂಡನಾ ಆದೇಶವು ನಿರರ್ಥಕವಾಗಿದೆಯೇ?

2. (1994) 2 ಎಸ್ಸಿಸಿ 615

3. ಎಐಆರ್ 2015 ಎಸ್ಸಿ 545

4. ಎಐಆರ್ 1988 ಎಸ್ಸಿ 117

5. ಎಐಆರ್ 2006 ಎಸ್ಸಿ 3642

11. ಸದರಿ ಅಂಶವನ್ನು ಪರಿಗಣಿಸಲು, ಮೊಕದ್ದಮೆಯ ಸಂಗತಿಗಳನ್ನು ಪುನರುಚ್ಚರಿಸಬೇಕಾಗುತ್ತದೆ.ಅರ್ಜಿದಾರನುದಿನಾಂಕ: 01.03.2011 ರಂದು ವಿವಿಧ ಗಾತ್ರದ ಕಂಪ್ಯೂಟರ್ ಸಂಬಂಧಿ ಲೇಖನ-ಸಾಮಗ್ರಿಯ ಬಿಡ್ಡಿಂಗ್ಗಾಗಿ ನೋಟೀಸನ್ನು ಹೊರಡಿಸಿದ್ದನು.ಬ್ಯಾಂಕಿನ ನಿಯತ ಸರಬರಾಜುದಾರರಿಗೆ ಬಿಡ್ ನೋಟೀಸಿನ ಪ್ರತಿಯನ್ನು ಕಳುಹಿಸಲಾಗಿತ್ತು, ಅದಕ್ಕನುಸಾರವಾಗಿ ವಿಷಯವನ್ನು ಸಕ್ಷಮ ಪ್ರಾಧಿಕಾರಿಯ ಮುಂದೆ ಮಂಡಿಸಲಾಗಿತ್ತು ಹಾಗೂ ನಿರ್ದಿಷ್ಟ ಅರ್ಜಿದಾರನಿಗೆ ಲೇಖನ-ಸಾಮಗ್ರಿಯ ಸರಬರಾಜು ವಿವರ ಒದಗಿಸುವಂತೆದಿನಾಂಕ: 10.03.2011 ರಂದು ಕಚೇರಿ ಟಿಪ್ಪಣಿಯನ್ನು ಬರೆಯಲಾಗಿತ್ತು.ಇದುದಿನಾಂಕ: 30.03.2012 ರಂದು ಅರ್ಜಿದಾರನ ವಿರುದ್ಧ ನೀಡಲಾಗಿರುವ ಕಾರಣ ತೋರಿಸುವ ನೋಟೀಸಿನ ವಸ್ತುವಿಷಯವಾಗಿತ್ತು.ಅರ್ಜಿದಾರನು, ಕಾರಣ ತೋರಿಸುವ ನೋಟೀಸಿನಲ್ಲಿ ಆರೋಪಿಸಿದಂತೆ ತಾನು ಯಾವುದೇ ದುರ್ನಡತೆ ಎಸಗಿಲ್ಲವೆಂದು ತನ್ನದಿನಾಂಕ: 27.04.2012 ರ ಉತ್ತರದಲ್ಲಿ ಸವಿವರವಾಗಿ ತಿಳಿಸಿದ್ದಾನೆ.

12. ಅರ್ಜಿದಾರನ ಉತ್ತರದಿಂದ ತೃಪ್ತರಾಗದೆ, ಆತನಿಗೆ ಆರೋಪ ಪಟ್ಟಿಯನ್ನು ನೀಡಲಾಯಿತು.ಆರೋಪ ಪಟ್ಟಿ ಮತ್ತು ಬಹಳಷ್ಟು ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ತನ್ನ ಉತ್ತರವನ್ನು ಸಲ್ಲಿಸಲು 30 ದಿನಗಳ ಸಮಯಾವಕಾಶ ಕೋರಿ,ದಿನಾಂಕ: 04.06.2012 ರಂದು ಅರ್ಜಿದಾರನು ಮನವಿಯೊಂದನ್ನು ನೀಡಿದ್ದನಾದರೂ, ವ್ಯವಹರಣೆಗಳನ್ನು ನಿಲ್ಲಿಸದೆ ಮುಂದುವರೆಸಿದರೂ ಅರ್ಜಿದಾರನು, ಮಂಡನಾ ಅಧಿಕಾರಿಯಾಗಿ ಕಾನೂನು ಪದವೀದರನಾಗಿರುವ ವಕೀಲನ ಸೇವೆಗಳನ್ನು ಪಡೆಯಲು ಬಯಸಿರುವುದಾಗಿ ಹೇಳಿ ಪುನಃ ಒಂದು ಮನವಿಯನ್ನು ನೀಡಿದನು ಮತ್ತು ಹಲವಾರು ವಿಚಾರಣೆಗಳನ್ನು ನಡೆಸಲಾಯಿತು.ತಾನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿರುವುದಾಗಿ ಮತ್ತು ತನ್ನನ್ನು ಅನುಚಿತ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ ಎಂಬುದಾಗಿ ಬ್ಯಾಂಕಿನ ಗಮನಕ್ಕೆ ಸಹ ತಂದನು.

13. ಅರ್ಜಿದಾರನು ಮಂಡಿಸಿದ ಯಾವುದೇ ಕಾರಣದ ಮೇಲೆ ವಿಚಾರಣಾ ಅಧಿಕಾರಿಯು ವ್ಯವಹರಣೆಗಳನ್ನು ನಿಲ್ಲಿಸಲಿಲ್ಲ.ಬದಲಾಗಿ, ಅರ್ಜಿದಾರನ ವಾದವನ್ನು ದಾಖಲಿಸಲು ಮುಂದಾಗಿದ್ದರು.ದಿನಾಂಕ: 17.09.2012 ರಂದು ನಡೆದ ಸದರಿ ವ್ಯವಹರಣೆಗಳು ನೀಡಲಾದ ನೋಟೀಸಿಗೆ ಸಂಬಂಧಿಸಿರಲೇ ಇಲ್ಲ. ಶೀಘ್ರ ಪರಾಮರ್ಶನೆಯ ಉದ್ದೇಶಕ್ಕಾಗಿ ಅವುಗಳ ಉದ್ಧೃತ ಭಾಗವನ್ನು ನೀಡಲಾಗಿದೆ:

"ವಿಚಾರಣಾ ವ್ಯವಹರಣೆಗಳ ಟಿಪ್ಪಣಿಗಳು:

ದಿನಾಂಕ:30.08.2012 ರ ನನ್ನ ವಿಚಾರಣಾ ನೋಟೀಸ್ಸಂಖ್ಯೆ: ಐಎನ್ಕ್ಯು.ನೋಟೀಸ್/ಸಿಜಿಎಸ್/467 ಮತ್ತುದಿನಾಂಕ: 07.09.2012 ರ ಸಂಖ್ಯೆ ಐಎನ್ಕ್ಯು, ನೋಟೀಸ್ -2/ಸಿಜಿಎಸ್/467 ರ ತರುವಾಯದ ಪತ್ರದ ಪ್ರಕಾರ, ಮೇಲೆ ಸೂಚಿಸಿದ ವ್ಯಕ್ತಿಗಳು ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ಉಪಸ್ಥಿತರಿರುವುದನ್ನು ಉಲ್ಲೇಖಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಈ ಹಂತದಲ್ಲಿ, ಶ್ರೀ ಆರ್. ವೆಂಕಟರಾಮನ್, ವ್ಯವಸ್ಥಾಪಕ (ಐಆರ್), ನೋಡಲ್ ಇಂಡಸ್ಟ್ರಿಯಲ್ ರಿಲೇಷನ್ಸ್ ಸೆಲ್, ಪ್ರಾದೇಶಿಕ ಕಚೇರಿ (ನಗರ), ಹೈದರಾಬಾದ್ ಇವರು, ಆಡಳಿತ ಮಂಡಳಿಯ ಪರವಾಗಿ ವಾದವನ್ನು ಮಂಡಿಸಲು ಅಸಿಸ್ಟಂಟ್ ಜನರಲ್ ಮ್ಯಾನೇಜರ್ (ಪಿ), ಮುಖ್ಯ ಕಚೇರಿ:ಮಣಿಪಾಲ್, ಎಂದರೆ ಶಿಸ್ತು ಪ್ರಾಧಿಕಾರಿ ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಿ ನೀಡಿದದಿನಾಂಕ: 27.08.2012 ರ ಪತ್ರವನ್ನು ಸಲ್ಲಿಸಿದ್ದು, ಅದನ್ನು ದಾಖಲೆಗೆ ತೆಗೆದುಕೊಳ್ಳಲಾಗಿದೆ.

ಈ ಹಂತದಲ್ಲಿ, ಶ್ರೀ ಎ.ಕೆ. ಸಿದ್ದಲಿಂಗಪ್ಪ, ತಾನು ಯಾವುದೇ ಪ್ರತಿವಾದ ಸಹಾಯಕರ ನೆರವು ಪಡೆಯದೆ ಇಂದಿನ ಸುನಾವಣೆಯಲ್ಲಿ ಪಾಲ್ಗೊಳ್ಳುವುದಾಗಿ ಮತ್ತು ಸೂಕ್ತ ಸಮಯದಲ್ಲಿ ಪ್ರತಿವಾದದ ನೆರವಿನ ಸೇವೆಗಳನ್ನು ತಾನು ಪಡೆದುಕೊಳ್ಳುವುದಾಗಿ ತಿಳಿಸಿದರು.

ವಿಚಾರಣೆ ಪ್ರಾರಂಭವಾಗುವ ಮುನ್ನ, ಇಲಾಖಾ ವಿಚಾರಣೆಯನ್ನು ನಡೆಸುವ ಪ್ರಕ್ರಿಯೆ ಹಾಗೂ ಹಾಗೂ ಅವರ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಕುರಿತು ಶ್ರೀ ಸಿದ್ದಲಿಂಗಪ್ಪನವರಿಗೆ ನಾನು ಈ ಕೆಳಗಿನಂತೆ ವಿವರಿಸಿದೆ:

ವಿಚಾರಣೆಯನ್ನು ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ನೌಕರ (ಡಿ &ಎ) [ಎಸ್ಬಿಒಇ (ಡಿ &ಎ)] ವಿನಿಯಮಗಳು, 1976 ರ ಉಪಬಂಧಗಳಿಗನುಸಾರವಾಗಿ ನಡೆಸಲಾಗುತ್ತಿದ್ದು, ಅದು ಪ್ರತಿವಾದ ಸಹಾಯಕರನ್ನು ಎಂದರೆ ಬ್ಯಾಂಕಿನಲ್ಲಿ ಕಾರನಿರ್ವಹಿಸುತ್ತಿರುವ ಯಾರೇ ಸಹ-ಅಧಿಕಾರಿ ಉದ್ಯೋಗಿಯನ್ನು ತೊಡಗಿಸಿಕೊಳ್ಳಲು ಆರೋಪ ಪಟ್ಟಿ ನೀಡಲ್ಪಟ್ಟ ಅಧಿಕಾರಿ ನೌಕರ-ಅರ್ಜಿದಾರನಿಗೆ (ಸಿಎಸ್ಒಇಗೆ) ಅನುಮತಿ ನೀಡುತ್ತದೆ.ಪ್ರಾರಂಭದಲ್ಲಿ ವ್ಯವಸ್ಥಾಪನಾ ಮಂಡಳಿಯು ದೈನಂದಿನ ಆಧಾರದ ಮೇಲೆ ದಾಖಲಿಸಲಾಗುವ ದಸ್ತಾವೇಜೀಯ ಸಾಕ್ಷ್ಯಗಳಿಗಿಂತ ಹೆಚ್ಚಿನ ಸಾಕ್ಷ್ಯವನ್ನು ಮಂಡಿಸುವ ಮೂಲಕ ತಮ್ಮ ಸಾಕ್ಷ್ಯವನ್ನು ಸೂಚಿಸುವುದು ಮತ್ತು ಪ್ರತಿಯೊಬ್ಬ ಸಾಕ್ಷಿದಾರನ ಸಾಕ್ಷ್ಯ ಮುಕ್ತಾಯವಾದ ನಂತರ, ಸಿಎಸ್ಒಇ ಆ ಸಾಕ್ಷಿದಾರನನ್ನು ಪಾಟಿ-ಸವಾಲು ಮಾಡುವರು.ವ್ಯವಸ್ಥಾಪನಾ ಮಂಡಳಿಯ ಸಾಕ್ಷ್ಯ ಎ ಮುಕ್ತಾಯಗೊಂಡ ನಂತರ, ಆರೋಪ ಪಟ್ಟಿ ನೀಡಲಾಗಿರುವ ಅಧಿಕಾರಿ-ನೌಕರನಿಗೆ, ವ್ಯವಸ್ಥಾಪನಾ ಮಂಡಳಿಯು ದಾಖಲೆಗೆ ತಂದ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡು ಮೌಖಿಕವಾಗಿ ಅಥವಾ ಲಿಖಿತದಲ್ಲಿ ತನ್ನ ಪ್ರತಿವಾದದ ಹೇಳಿಕೆಯನ್ನು ದಾಖಲೆಗೆ ತರುವ ಅವಕಾಶವನ್ನು ನೀಡಲಾಗುತ್ತದೆ.ಆ ತರುವಾಯ, ಆತನು ತನ್ನ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯಗಳೆರಡನ್ನೂ ಸೂಚಿಸಬಹುದು ಮತ್ತು ಹಾಗೂ ತಾನು ಸಾಕ್ಷಿದಾರನಾಗಿ ಹಾಜರಾಗಲು ಅಪೇಕ್ಷಿಸಿದಲ್ಲಿ, ಅವರು ಹಾಗೆ ಮಾಡಬಹುದು.ಆ ಸಂದರ್ಭದಲ್ಲಿ, ಅವರು ಮೊದಲ ಸಾಕ್ಷಿದಾರನಾಗಿ ಹಾಜರಾಗಿ, ತರುವಾಯ ತನ್ನ ಇತರ ಯಾರೇ ಸಾಕ್ಷಿದಾರರಿದ್ದರೆ ಅವರನ್ನು ಹಾಜರುಪಡಿಸಬಹುದು.ಸಿಎಸ್ಒಇ/ಅವರ ಪರವಾಗಿ ಹಾಗೆ ಪರೀಕ್ಷಿಸಿದ ಸಾಕ್ಷಿದಾರರನ್ನು ಮಂಡನಾಧಿಕಾರಿಯು ಪಾಟಿ-ಸವಾಲು ಮಾಡುವರು.ಸಿಎಸ್ಒಇ ಸಿಎಸ್ಒ ಸಾಕ್ಷಿದಾರನಾಗಿ ಹಾಜರಾಗದ ಸಂದರ್ಭದಲ್ಲಿ, ವಿಚಾರಣಾ ಅಧಿಕಾರಿಯು ಸಾಮಾನ್ಯ ಪರೀಕ್ಷೆಯ ರೂಪದಲ್ಲಿ ಅವರಿಗೆ ಪ್ರಶ್ನೆಗಳನ್ನು ಕೇಳುವರು.ಆ ತರುವಾಯ ವ್ಯವಸ್ಥಾಪನಾ ಮಂಡಳಿಗೆ ಹಾಗೂ ಸಿಎಸ್ಒಇಗೆ ತಮ್ಮ ತಮ್ಮ ವಾದಗಳನ್ನು ಮೌಖಿಕವಾಗಿಯಾಗಲಿ ಅಥವಾ ಲಿಖಿತದಲ್ಲಿಯಾಗಲಿ ಮಂಡಿಸಲು ಅವಕಾಶ ನೀಡಲಾಗುವುದು.ಆ ತರುವಾಯ, ವಿಚಾರಣಾ ಪ್ರಾಧಿಕಾರಿಯು ತಮ್ಮ ವರದಿಯನ್ನು ಶಿಸ್ತು ಪ್ರಾಧಿಕಾರಿಗೆ ಸಲ್ಲಿಸುವರು ಮತ್ತು ಅದರ ಪ್ರತಿಯನ್ನು, ತನ್ನ ನಿವೇದನೆಗಳು ಯಾವುವಾದರೂ ಇದ್ದರೆ, ನಿಗದಿಪಡಿಸಿದ ಸಮಯದೊಳಗೆ ಅವುಗಳನ್ನು ಸಲ್ಲಿಸಲು ಅವರಿಗೆ ಶಿಸ್ತು ಪ್ರಾಧಿಕಾರಿಗಳು ಅವಕಾಶ D ಮಾಡಿಕೊಡುವರು.ಈ ಪ್ರಕ್ರಿಯೆಯ ನಂತರ, ಆರೋಪಗಳು ಸಾಬೀತಾದರೆ, ದುರ್ನಡತೆಯ ತೀವ್ರತೆಯನ್ನು ಪರಿಗಣನೆಗೆ ತೆಗೆದುಕೊಂಡು, ಶಿಸ್ತು ಪ್ರಾಧಿಕಾರಿಯು ಅವರಿಗೆ ದಂಡನೆ ವಿಧಿಸುವರು ಮತ್ತು ತನಗೆ ವಿಧಿಸಿದ ದಂಡನೆಯಿಂದ ಸಿಎಸ್ಒ ಬಾಧಿತನಾದರೆ, ಅವರು ಅಪೀಲು ಪ್ರಾಧಿಕಾರಕ್ಕೆ ಅದರ ವಿರುದ್ಧ ಅಪೀಲು ಸಲ್ಲಿಸಬಹುದು.

ಇಂದು ನಡೆದ ಪ್ರಾಥಮಿಕ ವಿಚಾರಣಾ ಸಮಯದಲ್ಲಿ, ಸಿಎಸ್ಒಇ ವಿರುದ್ಧ ಹೊರಿಸಲಾದ ಆರೋಪ/ಆಪಾದನೆಗಳನ್ನು ಒಪ್ಪಿಕೊಳ್ಳಲು ಅಥವಾ ಅಲ್ಲಗಳೆಯಲು ಅವರಿಗೆ ಅವಕಾಶ ನೀಡಲಾಗುವುದು ಮತ್ತು ತನ್ನ ವಿರುದ್ಧದ ಆರೋಪ ಆಪಾದನೆಗಳನ್ನು ಅವರು ಒಪ್ಪಿಕೊಂಡ ಸಂದರ್ಭದಲ್ಲಿ, ವಿಚಾರಣಾ ಅಧಿಕಾರಿಯು ಅದನ್ನು ದಾಖಲಿಸಿ, ಲಿಖಿತದಲ್ಲಿ ನಿರ್ಣಯಗಳನ್ನು ತಿಳಿಸುವರು.ತನ್ನ ವಿರುದ್ಧದ ಆರೋಪ/ಆಪಾದನೆಗಳನ್ನು ಅವರು ನಿರಾಕರಿಸಿದ ಸಂದರ್ಭದಲ್ಲಿ, ಅದನ್ನು ದಾಖಲಿಸಿ, ಮುಂದಿನ ವಿಚಾರಣಾ ವ್ಯವಹಾರಣೆಗಳನ್ನು ನಡೆಸಲಾಗುವುದು.ಮಂಡನಾಧಿಕಾರಿಯ ಹತ್ತಿರ ಲಭ್ಯವಿರುವ ದಸ್ತಾವೇಜುಗಳ ಮೂಲ ದಾಖಲೆಗಳೊಂದಿಗೆ/ಪ್ರಮಾಣಿತ ಪ್ರತಿಗಳೊಂದಿಗೆ ಆರೋಪ ಪಟ್ಟಿ ಜೊತೆ ಶಿಸ್ತು ಪ್ರಾಧಿಕಾರಿಯು ಸಿಎಸ್ಒಇಗೆ

ನೀಡಿದ ದಸ್ತಾವೇಜುಗಳ ಪ್ರತಿಗಳನ್ನು ಅವರು ಪರಿಶೀಲಿಸಬಹುದು ಮತ್ತು ತರುವಾಯ ಅವರು, ನಿಗದಿಪಡಿಸಿದ ಸಮಯದೊಳಗೆ ವಿಚಾರಣಾ ಪ್ರಾಧಿಕಾರಕ್ಕೆ ವ್ಯವಸ್ಥಾಪನಾ ಮಂಡಳಿಯಿಂದ ತನಗೆ ಅಗತ್ಯವಿರುವ ಯಾವುವಾದರೂ ದಸ್ತಾವೇಜುಗಳಿದ್ದರೆ, ಅವುಗಳ ಪಟ್ಟಿಯನ್ನು ಸಲ್ಲಿಸಬಹುದು.

ವಿಚಾರಣೆ ನಡೆಸುವುದಕ್ಕಾಗಿ ವ್ಯವಸ್ಥಾಪನಾ ಮಂಡಳಿಯು ಆರೋಪ ಪಟ್ಟಿಯನ್ನು ನೀಡಿರುವುದರಿಂದ, ಅದು ಮುಖ್ಯ ಸಾಕ್ಷ್ಯಗಳ ಮೂಲಕ ಅದನ್ನು ಸಾಬೀತುಪಡಿಸುವುದು:

ಪ್ರಶ್ನೆ:ಶ್ರೀ ಎ.ಕೆ. ಸಿದ್ದಲಿಂಗಪ್ಪನವರೇ, ವಿಚಾರಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಈಗ ನಾನು ವಿವರವಾಗಿ ನಿಮಗೆ ತಿಳಿಸಿರುವಂಥ ವಿಚಾರಣಾ ಪ್ರಕ್ರಿಯೆಗಳು, ನಿಯಮಗಳು ಮತ್ತು ವಿನಿಯಮಗಳು ನಿಮಗೆ ಅರ್ಥವಾಗಿವೆಯೇ?

ಉತ್ತರ:ಆಂಗ್ಲ ಭಾಷೆಯ ಮೂಲಕ ಅಧಿಕಾರಿಗಳ ಸೇವಾ ಷರತ್ತುಗಳು, ಐಆರ್ ವಿಷಯದಲ್ಲಿ ಮತ್ತು ವಿಚಾರಣಾ ವೇದಿಕೆಯಲ್ಲಿ ಮಂಡಿಸುವುದರಲ್ಲಿ ನಾನು ಪರಿಣಿತನಲ್ಲ.ನಾನು ಈಗಾಗಲೇ ಸವಿವರವಾಗಿ ವಿಚಾರಣೆ ನಡೆಸುವ ಪ್ರಕ್ರಿಯೆಯನ್ನು ನಿಮಗೆ ವಿವರಿಸಿದ್ದೇನೆ.ವಿಚಾರಣಾ ಅವಧಿಯಲ್ಲಿ ನಿಮ್ಮ ವಾದವನ್ನು ಪ್ರತಿವಾದಿಸಲು ನಿಮಗೆ ನೆರವು ನೀಡಲು ವಿಚಾರಣಾ ವ್ಯವಹರಣೆಗಳಲ್ಲಿ ಹಾಗೂ ಆಂಗ್ಲ ಭಾಷೆಯಲ್ಲಿ ಸಾಕಷ್ಟು ತಿಳುವಳಿಕೆಯುಳ್ಳ ಪ್ರತಿವಾದ ಸಹಾಯಕರನ್ನು ತೊಡಗಿಸಿಕೊಳ್ಳಲು ಅವಕಾಶವಿದೆ.ಆದ್ದರಿಂದ, ಯಾರೇ ಸಹ-ಅಧಿಕಾರಿಯನ್ನು ನಿಮ್ಮ ನೆರವಿಗೆ ತೊಡಗಿಸಿಕೊಳ್ಳಲು ನಿಮಗೆ ಸಲಹೆ ನೀಡಲಾಗುತ್ತದೆ.ವಿಚಾರಣೆಗಳನ್ನು ನಡೆಸುವ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ನಿಮಗೆ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ನೌಕರ (ಡಿ &ಎ) [ಎಸ್ಬಿಒಇ (ಡಿ &ಎ)] ವಿನಿಯಮಗಳು, 1976 ರ ಪ್ರತಿ ಅಗತ್ಯವಿದ್ದ ಸಂದರ್ಭದಲ್ಲಿ, ಸೂಕ್ತ ಸಮಯದೊಳಗೆ ಅದನ್ನು ನಿಮಗೆ ಒದಗಿಸಲಾಗುವುದು.

ಈ ವಿಷಯದಲ್ಲಿ ನೀವು ಪ್ರತಿವಾದದ ನೆರವು ಒದಗಿಸುತ್ತಿರುವಿರಿ ಎಂಬುದು ನಿಜವಾದರೂ, ಅವರಿಂದ ಪ್ರತಿವಾದದ ನೆರವು ಪಡೆಯುವ ಸಲುವಾಗಿ ನಾನು ಯಾವುದೇ ಒಕ್ಕೂಟ/ಸಂಘದ ಸದಸ್ಯನಲ್ಲ ಮತ್ತು ಸದರಿ ಸಂಘದ/ಒಕ್ಕೂಟದ ಪ್ರತಿನಿಧಿಗಳನ್ನು/ಸಹೋದ್ಯೋಗಿಗಳನ್ನು ನಾನು ವಿಚಾರಿಸಿದ್ದು, ಅವರು ನಾನು ಅವರ ಒಕ್ಕೂಟ/ಸಂಘದ ಸದಸ್ಯನಾಗಿರುವುದಿಲ್ಲವೆಂದು ಹೇಳಿ, ಆ ಮೂಲಕ 9 ನೆರವು ನೀಡಲು ನಿರಾಕರಿಸಿದ್ದಾರೆ.ನಾನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿದ್ದು, ಎರಡೂ ಕಿವಿಗಳಲ್ಲಿ ಶಬ್ದ ಆಲಿಸುವ ಸಾಮರ್ಥ್ಯ ಇಲ್ಲದಿರುವುದರಿಂದ, ಈ ವೇದಿಕೆಯಲ್ಲಿ ವಿಚಾರಣಾ ಅಧಿಕಾರಿ ಅಥವಾ ಪೀಠಾಸೀನ ಅಧಿಕಾರಿಗಳು (ಪಿಒ) ನೀಡಿದ ಮಂಡಿಸಿದ ವಾದಗಳನ್ನು/ಪ್ರಶ್ನೆಗಳನ್ನು, ಉತ್ತರಗಳನ್ನು ಅರಗಿಸಿಕೊಳ್ಳಲು ನಾನು ಸಮರ್ಥನಾಗಿಲ್ಲ.ವಿಕಲಚೇತನ ವ್ಯಕ್ತಿಗಳ (ಸಮಾನ ಅವಕಾಶಗಳು, ಸಂಪೂರ್ಣವಾಗಿ ಪಾಲ್ಗೊಳ್ಳುವ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 1995 ರ ಪ್ರಕಾರ, ಸರ್ಕಾರವು ವಿಕಲಚೇತನ ವ್ಯಕ್ತಿಗಳಿಗೆ ಸಂರಕ್ಷಣೆ ನೀಡಿರುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲೂ ಸಹ, ದಯವಿಟ್ಟು ಸಿಎಸ್ಒಇಯ ಉತ್ತಮ ಹಿತಾಸಕ್ತಿಯಿಂದ ಐಆರ್ ವಿಷಯ/ಸೇವಾ ವಿಷಯ ಗೊತ್ತಿರುವ ಪ್ರತಿವಾದ ಸಹಾಯಕನನ್ನು ನನಗೆ ಒದಗಿಸಬೇಕೆಂದು ನಾನು ಈ ವೇದಿಕೆ ಮುಂದೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಸಿಎಸ್ಒಇ (ಆರೋಪ ಪಟ್ಟಿ ನೀಡಲ್ಪಟ್ಟ ಅಧಿಕಾರಿ ಉದ್ಯೋಗಿ-ಅರ್ಜಿದಾರ)

ವಿಚಾರಣೆಯನ್ನು ಮೇಲೆ ಹೇಳಿದ ನೋಟೀಸ್ ಮತ್ತು ಪತ್ರದ ರೂಪದಲ್ಲಿ ಪ್ರಾರಂಭಿಸಲಾಗಿದ್ದು, ಅದರಲ್ಲಿ ತನ್ನ ಪ್ರತಿವಾದದ ಸಹಾಯಕನನ್ನಾಗಿ ಯಾರೇ ಸಹ-ಅಧಿಕಾರಿಯನ್ನು ಸಿಎಸ್ಒಇ ತೊಡಗಿಸಿಕೊಳ್ಳಬಹುದು ಮತ್ತು ಆತನು ಯಾವುದೇ ಒಕ್ಕೂಟದ ಸಂಘದ ಸದಸ್ಯನಾಗಿರಬೇಕಾದ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.ಇದಲ್ಲದೆ, ವ್ಯವಸ್ಥಾಪನಾ ಮಂಡಳಿಯು ಪ್ರತಿವಾದ ಸಹಾಯಕನ ನೆರವನ್ನು ಒದಗಿಸಲು ಸೇವಾ ವಿನಿಯಮಗಳಲ್ಲಿ ಯಾವುದೇ ಉಪಬಂಧ ಕಲ್ಪಿಸಿರುವುದಿಲ್ಲ ಮತ್ತು ತನ್ನ ಪ್ರತಿವಾದಕ್ಕಾಗಿ ಯಾರೇ ಸಹೋದ್ಯೋಗಿ ಅಧಿಕಾರಿಯನ್ನು ತೊಡಗಿಸಿಕೊಳ್ಳಲು ಸಿಎಸ್ಒಇ ಮುಕ್ತನಿದ್ದಾನೆ.ಇದರ ಬಗ್ಗೆ ಚೆನ್ನಾಗಿ ಗೊತ್ತಿದ್ದೇ, ಸಿಎಸ್ಒಇ ಈ ವಿಚಾರಣಾ ವೇದಿಕೆ ಮುಂದೆ ಹಾಜರಾಗಿದ್ದು, ಪ್ರಾರಂಭದಲ್ಲಿ, ಆತನು ಯಾವುದೇ ಪ್ರತಿವಾದದ ಸಹಾಯಕರ ನೆರವನ್ನು ಪಡೆದುಕೊಳ್ಳದೆ ಇಂದಿನ ವಿಚಾರಣೆಯಲ್ಲಿ ಭಾಗವಹಿಸುತ್ತಿದ್ದಾನೆ.ಈಗ, ವಿಚಾರಣಾ ವ್ಯವಹರಣೆಗಳನ್ನು ಲಂಬಿಸಲು ಮಾತ್ರವೇ ಮೇಲಿನ ವಾದಗಳನ್ನು ಸಿಎಸ್ಒಇ ಮಾಡುತ್ತಿದ್ದಾರೆ.ಇದಲ್ಲದೆ, ಇದು ಪ್ರಾಥಮಿಕ ಸುನಾವಣೆ ಮಾತ್ರವಾಗಿದ್ದು, ಇದು ವಿಚಾರಣಾ ಪ್ರಕ್ರಿಯಗಳನ್ನು

ವಿವರಿಸುವ ಮತ್ತು ಸಿಎಸ್ಒಇ ಮೇಲೆ ಹೊರಿಸಿದ ಆರೋಪವನ್ನು ಅವರು ಒಪ್ಪಿಕೊಳ್ಳುವರೇ ಅಥವಾ ನಿರಾಕರಿಸುವರೇ ಎಂಬುದನ್ನು ತಿಳಿದುಕೊಳ್ಳಲು ಹಾಗೂ ಅವರಿಗೆ ಒದಗಿಸಿದ ದಸ್ತಾವೇಜುಗಳನ್ನು ಪರಿಶೀಲಿಸಲು ಮಾತ್ರವೇ ಉದ್ದೇಶಿಸಿದೆ.ಇದಲ್ಲದೆ, ವ್ಯವಸ್ಥಾಪನಾ ಮಂಡಳಿಯು ಇಂದಿನ ವಿಚಾರಣೆಯಲ್ಲಿ ಯಾವುದೇ ಸಾಕ್ಷ್ಯವನ್ನು ಸೂಚಿಸುವುದಿಲ್ಲ.ಹಾಗಾಗಿ, ವ್ಯವಹರಣೆಗಳಲ್ಲಿ ಪಾಲ್ಗೊಳ್ಳಲು ಸಿಎಸ್ಒಇಗೆ ನಾನು ನಿರ್ದೇಶಿಸುತ್ತೇನೆ.(ಒತ್ತು ನೀಡಲಾಗಿದೆ)

ವ್ಯವಹರಣೆಯ ದಿನದ ಎಂದರೆದಿನಾಂಕ: 17.09.2012 ರ ಮೇಲೆ ಉದ್ಧರಿಸಿದ ವ್ಯವಹರಣೆಗಳ ಪ್ರಕಾರ, ಯಾರೇ ಪ್ರತಿವಾದ ಸಹಾಯಕನ ನೆರವನ್ನು ಪಡೆದುಕೊಳ್ಳಲು ಸಮಯಾವಕಾಶವನ್ನು ಅರ್ಜಿದಾರನು ಕೋರಿದ್ದಾನೆ.ವಿಚಾರಣೆಯನ್ನು ನಡೆಸುವ ಪ್ರಕ್ರಿಯೆಯನ್ನು ಆತನು ಅರ್ಥ ಮಾಡಿಕೊಂಡಿರುವನೇ ಎಂದು ಕೇಳಿದಾಗ, ಆತನು ವಿಚಾರಣೆಯು ಆಂಗ್ಲ ಭಾಷೆಯಲ್ಲಿದೆಯೆಂದು ಉತ್ತರಿಸಿ, ತಾನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿರುವುನಾಗಿರುವುದರಿಂದ ವಿಚಾರಣಾ ಅಧಿಕಾರಿಯ ಮುಂದೆ ತನಗೆ ಪ್ರತಿವಾದದ ಸಹಾಯಕನನ್ನು ಒದಗಿಸಬೇಕೆಂದು ಮನವಿ ಮಾಡಿಕೊಂಡಿದ್ದಾನೆ.ಪ್ರತಿವಾದದ ಸಹಾಯಕನನ್ನು ಒದಗಿಸುವುದಕ್ಕೆ ವ್ಯವಸ್ಥಾಪನಾ ಮಂಡಳಿಗೆ ಯಾವುದೇ ಅವಕಾಶವಿಲ್ಲ ಮತ್ತು ಅರ್ಜಿದಾರನು ವಿಚಾರಣೆಯಲ್ಲಿ ಪಾಲ್ಗೊಳ್ಳುವುದನ್ನು ಮುಂದುವರಿಸಬೇಕೆಂದು ನಿರ್ದೇಶಿಸಿರುವುದು ವಿಚಾರಣಾ ಅಧಿಕಾರಿಯ ಅನ್ಯಾಯದ ತೀರ್ಪಾಗಿದೆ.ಅರ್ಜಿದಾರನನ್ನು ಸಾಮಾನ್ಯ ನೌಕರನೆಂಬಂತೆ ಪರಿಗಣಿಸಲಾಗಿದೆ ಎಂಬುದೇ ಅವನಿಗಾದ ಪ್ರಥಮ ಆಘಾತವಾಗಿದೆ.

14. ಕಾನೂನು ನೆರವು ಒದಗಿಸದಿರುವಂಥ ರೀತಿಯಲ್ಲಿ ತನ್ನನ್ನು ನಡೆಸಿಕೊಳ್ಳಲಾಗಿದೆ ಎಂಬ ಕಾರಣದ ಮೇಲೆ, ಅರ್ಜಿದಾರನು ರಿಟ್ ಅರ್ಜಿಸಂಖ್ಯೆ: 44341/2012 ರಲ್ಲಿ ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದು, ಅದರಲ್ಲಿ ಅ ಈ ನ್ಯಾಯಾಲಯವು ಪ್ರಾರಂಭದಲ್ಲಿದಿನಾಂಕ: 10.09.2012 ರ ಆದೇಶದ ಮೂಲಕ ಮುಂದಿನ ವ್ಯವಹರಣೆಗಳಿಗೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿದೆ.ದಿನಾಂಕ: 28.04.2011 ರಂದು ವಿಷಯವು ವಿಚಾರಣೆಗೆ ಬಂದಾಗ, ಇಲಾಖಾ ವಿಚಾರಣೆಯಲ್ಲಿ ವಕೀಲನ ಸೇವೆಗಳನ್ನು ಒದಗಿಸಲು ಅಥವಾ ಗೊತ್ತುಪಡಿಸಲು ಪ್ರತ್ಯರ್ಜಿದಾರರಿಗೆ ವಿನಿಯಮಗಳಲ್ಲಿ ಅವಕಾಶವಿಲ್ಲವೆಂಬ ಸಂಗತಿಯನ್ನು ಈ ನ್ಯಾಯಾಲಯವು ಗಮನಿಸಿ, ರಿಟ್ ಅರ್ಜಿಯನ್ನುದಿನಾಂಕ: 21.10.2013 ರಂದು ವಜಾಗೊಳಿಸಲಾಗಿದೆ.

15. ಅರ್ಜಿದಾರನು ಪ್ರಮಾಣೀಕೃತ ಪ್ರತಿಗೆ ಅರ್ಜಿ ಸಲ್ಲಿಸಿದ್ದು, ಅದನ್ನು ಇನ್ನೂ ನೀಡಬೇಕಿದೆ.ಅರ್ಜಿದಾರನು ವಾದವನ್ನು ಸಮರ್ಥಿಸಿಕೊಳ್ಳಲಾಗದ್ದರಿಂದ, ವಿಚಾರಣೆಯನ್ನುದಿನಾಂಕ: 11.11.2013 ರಂದು ಮುಂದುವರಿಸಲಾಯಿತು.ಆ ದಿನದಂದು ಅರ್ಜಿದಾರನು, ತಾನು ಅಪೀಲನ್ನು ಹೂಡಲು ಸಾಧ್ಯವಾಗುವಂತೆ ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶದ ಪ್ರಮಾಣೀಕೃತ ಪ್ರತಿಗಾಗಿ ಕಾಯಲು ವಿಚಾರಣಾ ಅಧಿಕಾರಿಯನ್ನು ಮನವಿ ಮಾಡಿಕೊಂಡಿದ್ದನು ಮತ್ತು ಆ ಕಾರಣದ ಮೇಲೆ ವ್ಯವಹರಣೆಗಳ ಮುಂದೂಡಿಕೆಗೆ ಕೋರಿದ್ದನು.ಬ್ಯಾಂಕು ವಿಷಯವನ್ನು ಮುಂದೂಡಲು ನಿರಾಕರಿಸಿತು.ದಿನಾಂಕ: 11.11.2013 ರ ವ್ಯವಹರಣೆಗಳನ್ನು ಈ ಮುಂದಿನಂತೆ ಓದಲಾಗಿದೆ:

" ವಿಚಾರಣಾ ವ್ಯವಹರಣೆಗಳ ನಡಾವಳಿಗಳು

ದಿನಾಂಕ:15.01.2013 ರ ನನ್ನ ವಿಚಾರಣಾ ನೋಟೀಸಿನ ಪ್ರಕಾರ, ನಿಯತ ವಿಚಾರಣೆಯನ್ನುದಿನಾಂಕ: 04.02.2013 ರಂದು ಮತ್ತು ಅಗತ್ಯವೆನಿಸಿದರೆ, ನಂತರದ ದಿನಗಳಲ್ಲಿ ನಡೆಸಲು ನಿಗದಿಪಡಿಸಲಾಗಿತ್ತು.ಸಿಎಸ್ಒಇ ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 44341/2012 (ಎಸ್-ಡಿಇ) ರಲ್ಲಿ ಮಾನ್ಯ ಕರ್ನಾಟಕ ಉಚ್ಚ ಚ ನ್ಯಾಯಾಲಯವು ನೀಡಿದ ತಡೆಯಾಜ್ಞೆಯ ಹಿನ್ನೆಲೆಯಲ್ಲಿ,ದಿನಾಂಕ: 04.02.2013 ರಂದು ನಡೆಸಬೇಕೆಂದು ನಿಗದಿಪಡಿಸಲಾಗಿದ್ದ ವಿಚಾರಣೆಯನ್ನು ಮುಂದೂಡಲಾಯಿತು ಮತ್ತು ಅದನ್ನುದಿನಾಂಕ: 30.01.2013 ರ ನನ್ನ ಪತ್ರ ಮುಖಾಂತರ ಸಿಎಸ್ಒ ಇಗೆ ತಿಳಿಸಲಾಗಿತ್ತು.ಈಗ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:21.10.2013 ರಂದು ಸಿಎಸ್ಒಇ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ವಿಚಾರಣೆಯನ್ನು,ದಿನಾಂಕ: 11.11.2013 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಾದೇಶಿಕ ಕಚೇರಿ -1, ಬೆಂಗಳೂರು ಇಲ್ಲಿ ನಡೆಸಬೇಕೆಂದು ನಿಗದಿಪಡಿಸಲಾಗಿದೆ ಮತ್ತು ಅದನ್ನುದಿನಾಂಕ: 16.10.2013 ರ ನನ್ನ ವಿಚಾರಣಾ ನೋಟೀಸಿನ ಮುಖಾಂತರ ಸಿಎಸ್ಒಇಗೆ ತಿಳಿಸಲಾಗಿದ್ದು, ಅದನ್ನುದಿನಾಂಕ: 28.10.2013 ರಂದು ಸಿಎಸ್ಒಇಗೆ

ಕಳುಹಿಸಲಾಗಿತ್ತು.ತದನುಸಾರವಾಗಿ, ಮೇಲಿನ ವ್ಯಕ್ತಿಗಳ ಉಪಸ್ಥಿತಿಯನ್ನು ಗುರುತಿಸುವ ಮೂಲಕ ಈಗ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ.

ಈ ಹಂತದಲ್ಲಿ, ನಾನು ಪ್ರತಿವಾದ ಸಹಾಯಕನ ಬಗ್ಗೆ ಮತ್ತೊಮ್ಮೆ ಸಿಎಸ್‌ಒಇಯನ್ನು ಕೇಳಿದೆ.ಅದಕ್ಕೆ ತಾನು ಯಾರೇ ಪ್ರತಿವಾದ ಸಹಾಯಕನ ಸೇವೆಗಳನ್ನು ಪಡೆಯದೆ ಇಂದಿನ ವಿಚಾರಣೆಯಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದ್ದನು.ಮುಂದುವರಿದು, ಈ ವಿವಾದಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ತಾನು ರಿಟ್ ಅರ್ಜಿಯನ್ನು ಸಲ್ಲಿಸಿರುವುದಾಗಿ ಆತನು ನಿವೇದಿಸಿಕೊಂಡಿದ್ದಾನೆ.

ಈ ಹಂತದಲ್ಲಿ, ನನ್ನ ವಿಚಾರಣಾ ನೋಟೀಸಿನ ಪ್ರಕಾರ, ಇಂದಿನ ವಿಚಾರಣೆಯಲ್ಲಿ ತಾನು ಪಾಲ್ಗೊಳ್ಳುತ್ತಿರುವುದಾಗಿ ಸಿಎಸ್‌ಒಇ ನಿವೇದಿಸಿಕೊಂಡಿರುವರು.ಇದಲ್ಲದೆ, ಅವರುದಿನಾಂಕ: 11.11.2013 ರಂದು ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ತಾನು ರಿಟ್ ಅರ್ಜಿಸಂಖ್ಯೆ: 44341/2012 ನ್ನು ಸಲ್ಲಿಸಿದ್ದು, ಅದನ್ನುದಿನಾಂಕ: 21.10.2013 ರಂದು ವಿಲೇ ಮಾಡಲಾಗಿತ್ತೆಂದು ಉಲ್ಲೇಖಿಸಲಾಗಿದೆ.ತೀರ್ಪಿನ ಅಂಶಗಳನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಇದುವರೆಗೆ ಬಿಡುಗಡೆ ಮಾಡಿರುವುದಿಲ್ಲ.ವಾದದ ಅಂತರ್ಜಾಲ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.ಇದಲ್ಲದೆ ಅವರು ನಿವೇದಿಸಿಕೊಂಡಿರುವುದೇನೆಂದರೆ:

" ನಿಮ್ಮ ಪತ್ರದ ಪ್ರಕಾರ, ನಾನು ತಮ್ಮ ಮುಂದೆ ಹಾಜರಾಗಿದ್ದು,ದಿನಾಂಕ: 21.10.2013 ರಂದು ವಿಲೇ ಮಾಡಲಾಗಿದ್ದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ರಿಟ್ ಅರ್ಜಿಸಂಖ್ಯೆ: 44341/2012 ರಲ್ಲಿ ಏಕ ಸದಸ್ಯ ಪೀಠ ನ್ಯಾಯಾಧೀಶರು ಹೊರಡಿಸಿರುವ ಅಂತಿಮ ಆದೇಶದ ವಿರುದ್ಧ ನಾನು ರಿಟ್ ಅಪೀಲನ್ನು ಸಲ್ಲಿಸುವ ಪ್ರಕ್ರಿಯೆಯಲ್ಲಿದ್ದೇನೆಂದು ಮುಷ್ಟೀಕರಿಸಿ ಈ ಪತ್ರವನ್ನು ಸಲ್ಲಿಸುತ್ತಿದ್ದೇನೆ.ಉಲ್ಲೇಖದ ಮೇರೆಗೆ ತಮ್ಮ ಪತ್ರದಲ್ಲಿ ಪದ್ಯಾಲೋಚಿಸಿದ/ನಮೂದಿಸಿದ ತೀರ್ಪಿನ ಪೂರ್ಣ ಪಠ್ಯವನ್ನು ಪಡೆಯಲು ಸದರಿ ಅಂತಿಮ ಆದೇಶದ ಪ್ರಮಾಣಿತ ಪ್ರತಿಗಾಗಿ ನಾನು ಕಾಯುತ್ತಿದ್ದೇನೆ.

ಇದಲ್ಲದೆ, ರಿಟ್ ಅರ್ಜಿಯಲ್ಲಿ ನಾನು, ಈ ಮುಂದಿನ ಕಾರಣಗಳ ಆಧಾರದ ಮೇಲೆ ವಕೀಲರನ್ನು ತೊಡಗಿಸಿಕೊಳ್ಳುವ ಸಂಬಂಧದಲ್ಲಿ ನಿರ್ದೇಶನಗಳಗಾಗಿ ಮನವಿ ಮಾಡಿಕೊಂಡಿದ್ದೆ.ಅವೆಂದರೆ:

ಎ) ನಾನು, ಶೇಕಡ 98 ರಷ್ಟು ಶಾಶ್ವತ ಶ್ರವಣ ದೋಷದ ತೊಂದರೆಯಿಂದ ಬಳಲುತ್ತಿದ್ದು, ಉದ್ದೇಶಿತ ಇಲಾಖಾ ವಿಚಾರಣೆಯಲ್ಲಿನ ವ್ಯವಹರಣೆಗಳನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥನಾಗಿದ್ದೇನೆ.

ಬಿ) ಪ್ರತಿವಾದಕ್ಕೆ ಅಗತ್ಯವಿರುವ ದಸ್ತಾವೇಜುಗಳ ಸುಸಂಗತೆಯನ್ನು ಅರ್ಥ ಮಾಡಿಕೊಳ್ಳಲು ನಾನು ಅಸಮರ್ಥನಾಗಿದ್ದೇನೆ.

ಸಿ) ನಾನು, ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಒಕ್ಕೂಟ/ಸಂಘವನ್ನು ಒಳಗೊಂಡಂತೆ ಯಾವುದೇ ಕಾರ್ಮಿಕ ಒಕ್ಕೂಟ/ಸಂಘದ ಸದಸ್ಯನಲ್ಲ ಮತ್ತು ಶೀಘ್ರವೇ ನಾನು ವಯೋ ನಿವೃತ್ತಿ ಹೊಂದಲಿರುವುದರಿಂದ ಸಹೋದ್ಯೋಗಿಗಳು ನನ್ನ ಪರವಾಗಿ ವಾದಿಸಲು ಹಿಂಜರಿಯುತ್ತಿದ್ದಾರೆ ಮತ್ತು ಪ್ರತಿವಾದವಿಲ್ಲದೆ, ವಿಚಾರಣಾ ವ್ಯವಹರಣೆಗಳಲ್ಲಿ ನಾನು ಭಾಗವಹಿಸಲಾಗುವುದಿಲ್ಲ.

ಡಿ) ಪ್ರತಿಕಾರದಿಂದ ಮತ್ತು ನನ್ನನ್ನು ಬಲಿಪಶು ಮಾಡಲು, ದೋಷಯುಕ್ತ ಆರೋಪ ಪಟ್ಟಿ ಮತ್ತು ಇತರ ಕಾರಣಗಳೊಂದಿಗೆ ನನ್ನನ್ನು ವಿವಾದಕ್ಕೊಳಪಡಿಸಲಾಗಿದೆಯಾದ್ದರಿಂದ, ಮೇಲೆ ಹೇಳಿದಂತೆ ನಾನು ರಿಟ್ ಅಪೀಲನ್ನು ಹೂಡುತ್ತಿದ್ದೇನೆ.

ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಉದ್ದೇಶಿತ ರಿಟ್ ಅಪೀಲು ವಿಲೇ ಆಗುವವರೆಗೆ ವಿಚಾರಣಾ ವ್ಯವಹರಣೆಗಳನ್ನು ಸ್ಥಗಿತದಲ್ಲಿಡಬೇಕೆಂದು ನಾನು ತಮ್ಮನ್ನು ಕೋರುತ್ತೇನೆ.

ನಿರ್ಣಯ:

ಸಿಎಸ್‌ಒಇ ನಿವೇದನೆಗಳನ್ನು ಆಲಿಸಲಾಗಿದೆ ಮತ್ತು ಸಿಎಸ್‌ಒಇ ಸಲ್ಲಿಸಿದದಿನಾಂಕ: 11.11.2013 ರ ಪತ್ರವನ್ನು ಸಹ ದಾಖಲೆಗೆ ತೆಗೆದುಕೊಳ್ಳಲಾಗಿದೆ.

ದಿನಾಂಕ:21.10.2013 ರಂದು ಸಿಎಸ್‌ಒಇ ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 44341/2012 ನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ವಜಾಗೊಳಿಸಿದೆ ಎಂಬುದು ದಾಖಲೆಯಲ್ಲಿದೆ.ಸಿಎಸ್‌ಒಇ ಸಲ್ಲಿಸಿದ ರಿಟ್ ಅರ್ಜಿಯನ್ನು ವಜಾಗೊಳಿಸುವ ದೃಷ್ಟಿಯಲ್ಲಿ, ಈ ವಿಷಯದಲ್ಲಿ ಮತ್ತಷ್ಟು ಮುಂದುವರಿಯಲು ನಿರ್ಧರಿಸಲಾಗಿದೆ.ತಾನು ರಿಟ್ ಅರ್ಜಿಯನ್ನು ವಜಾಗೊಳಿಸುವುದರ ವಿರುದ್ಧ ರಿಟ್ ಅಪೀಲನ್ನು ಸಲ್ಲಿಸುವ ಪ್ರಕ್ರಿಯೆಯಲ್ಲಿರುವುದಾಗಿ ಸಿಎಸ್‌ಒಇ ಹೇಳರುವರಾದರೂ, ರಿಟ್ ಅಪೀಲಿನ ಸಲ್ಲಿಕೆಗೆ ಸಂಬಂಧಿಸಿದಂತೆ ಯಾವುದೇ ತಡೆಯಾಜ್ಞೆಯನ್ನಾಗಲಿ ಅಥವಾ ಸಂಬಂಧಪಟ್ಟ ದಾಖಲೆಗಳನ್ನಾಗಲಿ ಹಾಜರುಪಡಿಸಿರುವುದಿಲ್ಲ.ಹಾಗಾಗಿ, ಈ ಕಾರಣದ ಮೇಲೆ ವಿಚಾರಣೆಯನ್ನು ಮುಂದೂಡಲು ಸಿಎಸ್‌ಒಇ ಮನವಿಯನ್ನು ಪರಿಗಣಿಸಲಾಗುವುದಿಲ್ಲ.ಇದಲ್ಲದೆ, ರಿಟ್ ಅರ್ಜಿಯಲ್ಲಿ ಮತ್ತು ಇಂದು ಸಿಎಸ್‌ಒಇ ಸಲ್ಲಿಸಿರುವ ಪತ್ರದಲ್ಲಿ ಉಲ್ಲೇಖಿಸಲಾಗಿರುವ ಕಾರಣಗಳು ಸ್ವಲ್ಪ ಮಟ್ಟಿಗೆ ಬೇರೆ ಬೇರೆಯಾಗಿವೆ.ರಿಟ್ ಅರ್ಜಿಯಲ್ಲಿ ದಸ್ತಾವೇಜುಗಳ ಸುಸಂಗತೆಯ ಬಗ್ಗೆ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ.ಇದಲ್ಲದೆ, ಪ್ರಾಥಮಿಕ ಸುನಾವಣೆಯಲ್ಲೇ, ಸಿಎಸ್‌ಒಇಗೆ ಪ್ರತಿವಾದದ ಸಹಾಯಕರನ್ನು ಗೊತ್ತುಪಡಿಸಿಕೊಳ್ಳುವ ಬಗ್ಗೆ ಸವಿವರವಾಗಿ ತಿಳಿಸಲಾಗಿತ್ತು.ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು, ತನ್ನ ಪ್ರತಿವಾದ ಚ ಸಹಾಯಕನನ್ನಾಗಿ ವಕೀಲರನ್ನು ಗೊತ್ತುಪಡಿಸಿಕೊಳ್ಳುವ ಸಿಎಸ್‌ಒಇ ವಾದವನ್ನು ವಜಾಗೊಳಿಸಿತ್ತು.ಹಾಗಾಗಿ, ಈ ಹಂತದಲ್ಲಿ ವಿಚಾರಣೆಯನ್ನು ಮುಂದೂಡಲು ಸಾಧ್ಯವಿಲ್ಲ ಮತ್ತು ಮುಂದಿನ ವ್ಯವಹರಣೆಗಳಿಗಾಗಿ ವಿಚಾರಣೆಯಲ್ಲಿ ಪಾಲ್ಗೊಳ್ಳುವಂತೆ ಸಿಎಸ್‌ಒಇಗೆ ಸಲಹೆ ನೀಡಲಾಗಿದೆ.

ಸಹಿ/

ವಿಚಾರಣಾ ಪ್ರಾಧಿಕಾರಿ.

ಈ ಹಂತದಲ್ಲಿ ಸಿಎಸ್‌ಇ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಬಿಡುಗಡೆ ಮಾಡದಿದ್ದ ತೀರ್ಪಿನ ಅಂಶಗಳನ್ನು ತಿಳಿಯದೆ ಮತ್ತು ಅದನ್ನು ವಿಚಾರಣಾ ಪ್ರಾಧಿಕಾರಿಯು ಸಹ ವಿಷಯದಲ್ಲಿ ಮಂಡಿಸದಿರುವುದರಿಂದ, ವಿಚಾರಣೆಯಲ್ಲಿ ಭಾಗವಹಿಸುವುದು ತನಗೆ ಸಾಧ್ಯವಿಲ್ಲ ಎಂದು ಮನವಿ ಮಾಡಿಕೊಂಡು, ವಿಚಾರಣೆಯನ್ನು ಮುಂದೂಡುವಂತೆ, ಹಾಗೆ ಮಾಡದಿದ್ದಲ್ಲಿ ತನಗೆ ಭರಿಸಲಾಗದ ನಷ್ಟವುಂಟಾಗುತ್ತದೆ ಮತ್ತು ವಿಚಾರಣೆಯನ್ನು ಮತ್ತೆ ಮುಂದುವರಿಸುವುದು ಸಹಜ ನ್ಯಾಯ ತತ್ವಗಳ ಉಲ್ಲಂಘನೆಯೆನಿಸುತ್ತದೆ ಎಂದು ಕೋರಿದ್ದಾನೆ.

ಅಂತಿಮ ನಿರ್ಣಯ:

ದಿನಾಂಕ:21.10.2013 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಒದಗಿಸಿದ ಮಾಹಿತಿ ಪ್ರಕಾರ, ರಿಟ್ ಅರ್ಜಿಯನ್ನು ಮತ್ತು ಸಿಎಸ್‌ಒಇ ಒಪ್ಪಿಕೊಂಡಿರುವ ವಿವಿಧ ಕಾರಣಗಳಿಗಾಗಿ ಇಲಾಖಾ ವಿಚಾರಣೆಯಲ್ಲಿ ತನ್ನ ವಾದವನ್ನು ಸಮರ್ಥಿಸಲು ವಕೀಲರ ಸೇವೆಗಳನ್ನು ಗೊತ್ತುಪಡಿಸಿಕೊಳ್ಳುವ ಕುರಿತ ರಿಟ್ ರಿಟ್ ಅರ್ಜಿಯಲ್ಲಿನ ಮುಖ್ಯ ವಾದವನ್ನು ವಜಾಗೊಳಿಸಿರುವುದರಿಂದ, ವಿಚಾರಣೆಯನ್ನು ಮುಂದುವರಿಸಲು ಯಾವುದೇ ಕಾರಣವಿಲ್ಲ.ಅಲ್ಲದೆ, ವಿಚಾರಣೆ ಅವಧಿಯಲ್ಲಿ ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಮತ್ತು ಇಲಾಖಾ ವಿಚಾರಣೆಯ ವ್ಯವಹರಣೆಗಳನ್ನು ಸುಗಮವಾಗಿ ಪೂರ್ಣಗೊಆಸುವುದಕ್ಕೆ ಸಹಕರಿಸಲು ಸಿಎಸ್‌ಒಇ ಸಾಕಷ್ಟು ಅವಕಾಶಗಳನ್ನು ಪಡೆದಿರುವನು. "(ಒತ್ತು ನೀಡಲಾಗಿದೆ)

ಮೇಲೆ ಉದ್ಧರಿಸಿದ ವಿಚಾರಣಾ ವ್ಯವಹರಣೆಗಳ ಪ್ರಕಾರ, ವಿಚಾರಣಾ ಪ್ರಾಧಿಕಾರಿಯ ಮುಂದೆ ಅರ್ಜಿದಾರನು, ರಿಟ್ ಅರ್ಜಿಸಂಖ್ಯೆ: 44341/2012 ರಲ್ಲಿನ ಆದೇಶವನ್ನು ಇನ್ನೂ ಬಿಡುಗಡೆ ಮಾಡಬೇಕಿದೆ ಎಂದು ವಾದಿಸಿ, ಈ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಲು ತನಗೆ ಅವಕಾಶವಾಗುವಂತೆ ಪ್ರಮಾಣೀಕೃತ ಪ್ರತಿಯನ್ನು ಪಡೆಯಲು ಕಾಲಾವಕಾಶವನ್ನು ಕೋರಿದ್ದಾನೆ ಮತ್ತು ವಿಚಾರಣೆಯನ್ನು ಮುಂದೂಡಬೇಕೆಂದು ಮನವಿ ಮಾಡಿಕೊಂಡಿದ್ದಾನೆ.ಇದಕ್ಕಾಗಿ, ಪ್ರಮಾಣೀಕೃತ ಪ್ರತಿಗೆ ಕಾಯದೆ ಸಹ ಮತ್ತು ಮಾನ್ಯ ವಿಭಾಗೀಯ ಪೀಠದ ಮುಂದೆ ಅದನ್ನು ಪರೀಕ್ಷಿಸುವ ಅವಕಾಶಕ್ಕಾಗಿ, ಇನ್ನೂ ಹೆಚ್ಚಾಗಿ, ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ

ವ್ಯವಹರಣೆಗಳನ್ನು ತಡೆಯಲಾಗಿತ್ತು ಎಂಬ ಸಂಗತಿಯ ಹಿನ್ನೆಲೆಯಲ್ಲಿ, ವಿಚಾರಣಾ ಅಧಿಕಾರಿಯು ವಿಚಾರಣೆ ನಡೆಸಲು ಕ್ರಮ ಜರುಗಿಸಿ, ವ್ಯವಹರಣೆಗಳನ್ನು ನಡೆಸಿದ್ದಾರೆ.ಇದು ಅರ್ಜಿದಾರನಿಗೆ ಎರಡನೇ ಆಘಾತವಾಗಿದೆ.

16. ಅರ್ಜಿದಾರನು, ತನ್ನ ಎರಡೂ ಕಿವಿಗಳು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿದ್ದು, ತಾನು ವಿಚಾರಣೆಯಲ್ಲಿ ಏನು ನಡೆಯಿತು ಎಂಬುದನ್ನು ಕೇಳಿಸಿಕೊಂಡಿಲ್ಲ ಮತ್ತು ಪ್ರಶ್ನೆಗಳನ್ನು ಊಹಿಸಿ ಉತ್ತರ ನೀಡಿರುವುದಾಗಿ ವಿಚಾರಣೆಯಲ್ಲಿ ಪುನಃ ವಾದಿಸಿದ್ದಾನೆ ಹಾಗೂ ವ್ಯವಹರಣೆಗಳನ್ನು ಮತ್ತು ಪ್ರಶ್ನೆಗಳನ್ನು ಲಿಖಿತದಲ್ಲಿ ನೀಡಬೇಕೆಂದು, ಅದರಿಂದ ತಾನು ಅವುಗಳಿಗೆ ಲಿಖಿತದಲ್ಲಿ ಉತ್ತರಿಸಬಹುದಾಗಿದೆ ಎಂದು ಮನವಿ ಮಾಡಿಕೊಂಡಿದ್ದರೂ, ಪುನಃ ಬ್ಯಾಂಕ್ ಅದಕ್ಕೆ ಒಪ್ಪಲಿಲ್ಲವೆಂದು ನಿವೇದಿಸಿಕೊಂಡಿದ್ದಾನೆ.ನಿರ್ದಿಷ್ಟ ಪ್ರಶ್ನೆ ಮತ್ತು ಉತ್ತರವನ್ನು ಈ ಮುಂದಿನಂತೆ ಓದಲಾಗಿದೆ:

" ಡಿಕ್ಯು-33 (ಅರ್ಜಿದಾರನ ಪ್ರಶ್ನೆ): ನನಗೆ ಎರಡೂ ಕಿವಿಗಳಲ್ಲಿ ಶಬ್ದ ಆಲಿಸುವ ಶೇಕಡ 98 ರಷ್ಟು ಶ್ರವಣ ದೋಷವಿದೆ ಎಂಬುದು ತಮಗೆ ಚೆನ್ನಾಗಿ ತಿಳಿದಿದೆ, ನಿಮಗೆ ನಿಖರವಾಗಿ ಏನು ಅಗತ್ಯ ಎಂಬುದು ನನಗೆ ಸರಿಯಾಗಿ ಕೇಳಿಸಿರುವುದಿಲ್ಲ.ತದನುಸಾರವಾಗಿ, ನೀವು ಸಮ್ಮತಿ ಹೊಂದದಿರುವ ಅಂಶವನ್ನು ನನಗೆ ಲಿಖಿತದಲ್ಲಿ ನೀಡಿರೆಂದು ನಾನು ಕೇಳಿದ್ದೇನೆ.ನಿಮ್ಮ ಸಮ್ಮತಿ ಇದೆಯೇ?

ಉತ್ತರ:ನನ್ನ ಸಮ್ಮತಿ ಇಲ್ಲ " (ಬ್ಯಾಂಕ್ ಪ್ರತಿನಿಧಿಯ ಉತ್ತರ)

ಅರ್ಜಿದಾರನಿಗೆ ಸೂಕ್ತ ಅವಕಾಶ ಒದಗಿಸದೆ ಮತ್ತು ಅತ್ಯಾತುರದಲ್ಲಿ ವಿಚಾರಣಾ ವ್ಯವಹರಣೆಗಳನ್ನು ಮುಕ್ತಾಯಗೊಳಿಸಲಾಗಿದೆ.ವರದಿಯನ್ನನುಸರಿಸಿ, ಅರ್ಜಿದಾರನು ಅಪರಾಧಿಯೆಂದು ವಿಚಾರಣಾ ಅಧಿಕಾರಿಯು ನಿರ್ಣಯಿಸಿದ್ದಾರೆ.ವಿಚಾರಣಾ ಅಧಿಕಾರಿಯ ವರದಿಯ ಸುಸಂಗತ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

" ಸಿಎಸ್‌ಒಇ ತನ್ನದಿನಾಂಕ: 06.10.2012 ರ ಪತ್ರದ ಮೂಲಕ, ತನ್ನ ವಿರುದ್ಧ ಹೊರಿಸಲಾದ ಆರೋಪಗಳಿಗೆ ದಸ್ತಾವೇಜುಗಳ ಸುಸಂಗತತೆಯನ್ನು ಉಲ್ಲೇಖಿಸದೆ ಮತ್ತು ದಸ್ತಾವೇಜುಗಳು ಯಾವ ಅಭಿ ರಕ್ಷಕರಲ್ಲಿ ಲಭ್ಯವಿವೆಯೋ ಅವರ ಹೆಸರುಗಳನ್ನು ನಿರ್ದಿಷ್ಟಪಡಿಸದೆ 81 ದ ಸ್ತಾವೇಜುಗಳಿಗೆ ಮನವಿ ಮಾಡಿಕೊಂಡಿರುವುದು ದಾಖಲೆಯಲ್ಲಿದೆ.ಹಾಗಾಗಿ ನನ್ನದಿನಾಂಕ: 13.10.2012 ರ ಪತ್ರದ ಮೂಲಕ, ಆ ದಸ್ತಾವೇಜುಗಳನ್ನು ನಾನು ಸಂಗ್ರಹಿಸಿ ಒದಗಿಸಲು ಸಾಧ್ಯವಾಗುವಂತೆ, ಆತನಿಗೆ ಅವು ಹೇಗೆ ಸಹಾಯಕಾರಿ/ಆತನ ವಾದಕ್ಕೆ ಹೇಗೆ ಸುಸಂಗತ ಎಂಬುದನ್ನು ನಿರ್ದಿಷ್ಟವಾಗಿ ಹೇಳಿ, ಪತ್ರ ಸ್ವೀಕರಿಸಿದ 3 ದಿನಗಳ ಒಳಗಾಗಿ ತನ್ನ ಅಗತ್ಯತೆಗಳನ್ನು ಮರು-ಸಲ್ಲಿಸಲು ಸಲಹೆ ನೀಡಿದ್ದೆ.ಅಗತ್ಯ ಮಾಹಿತಿಯನ್ನು ನೀಡುವುದಕ್ಕೆ ಬದಲಾಗಿ, ಸಿಎಸ್‌ಒಇ ತನ್ನದಿನಾಂಕ: 20.10.2012 ರ ಪತ್ರದ ಮೂಲಕ,ದಿನಾಂಕ: 06.10.2012 ರ ತನ್ನ ಪತ್ರದಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳನ್ನು ಒದಗಿಸಲು ಮತ್ತೊಮ್ಮೆ ನನ್ನನ್ನು ಕೋರಿದ್ದಾನೆ.ನನ್ನದಿನಾಂಕ: 31.10.2012 ರ ಪತ್ರದ ಮೂಲಕ ನಾನು ಸಿಎಸ್‌ಒಇಗೆ, ಆತನ ವಿರುದ್ಧ ಹೊರಿಸಲಾದ ಆರೋಪಕ್ಕೆ/ಆಪಾದನೆಗೆ ದಸ್ತಾವೇಜುಗಳ ಸುಸಂಗತೆಯನ್ನು ಪರಿಶೀಅಸಿದ ನಂತರ ಅಭಿರಕ್ಷಕರಿಂದ ದಸ್ತಾವೇಜುಗಳನ್ನು ವಿಚಾರಣಾ ಪ್ರಾಧಿಕಾರಿಯು ಸಂಗ್ರಹಿಸಬಹುದೆಂದು ತಿಳಿಸಿದ್ದೆ.ಇದಲ್ಲದೆ, ಸಿಎಸ್‌ಒಇ ದಸ್ತಾವೇಜುಗಳ ಸುಸಂಗತತೆ ಮತ್ತು ನಿರ್ದಿಷ್ಟವಾಗಿ ಅಭಿರಕ್ಷಕರ ಹೆಸರುಗಳನ್ನು ನೀಡದೆ ಇರುವುದರಿಂದ, ದಸ್ತಾವೇಜುಗಳನ್ನು ಸಂಗ್ರಹಿಸಿ ಆತನಿಗೆ ನೀಡುವ ಸ್ಥಿತಿಯಲ್ಲಿ ನಾನು ಇಲ್ಲವೆಂದು ಸಹ ತಿಳಿಸಲಾಗಿತ್ತು.ಸದರಿ ಪತ್ರದಲ್ಲಿ ಸಿಎಸ್‌ಒಇಗೆ,ದಿನಾಂಕ: 07.11.2012 ರಂದು ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ಮೇಲಿನ ವಿಷಯ ಕುರಿತು ನಡೆಸಲಿರುವ ನಿಯತ ಸುನಾವಣೆಯನ್ನು ನಿಗದಿಪಡಿಸಿದ ಬಗ್ಗೆ ಮತ್ತು ತರುವಾಯದ ದಿನಗಳಲ್ಲಿ, ಅಗತ್ಯವಿದ್ದರೆ ವಿಚಾರಣೆಯಲ್ಲಿ ಪಾಲ್ಗೊಳ್ಳುವ ಸಲಹೆ ನೀಡಿ, ಅದಕ್ಕೆ ತಪ್ಪಿದಲ್ಲಿ ವಿಚಾರಣೆಯನ್ನು ಏಕಪಕ್ಷೀಯವೆಂದು ನಿರ್ಣಯಿಸಲಾಗುವುದು ಎಂದು ತಿಳಿಸಲಾಗಿತ್ತು.(ಒತ್ತು ನೀಡಲಾಗಿದೆ)

ವಿಚಾರಣಾ ಅಧಿಕಾರಿಯ ಸದರಿ ವರದಿಯನ್ನಾಧರಿಸಿ, ಶಿಸ್ತು ಪ್ರಾಧಿಕಾರಿಯು ಈ ಮುಂದಿನ ದಂಡನೆಯನ್ನು ವಿಧಿಸಿದ್ದಾರೆ:

" " 1 ಆಜ್ಞೆ

ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ನೌಕರರ (ನಡತೆ) ವಿನಿಯಮಗಳು, 1976 ರ 24 ನೇ ವಿನಿಯಮದೊಂದಿಗೆ ಓದಲಾಗುವ 3 ( 1) ನೇ ವಿನಿಯಮದ ಉಲ್ಲಂಘನೆಗಾಗಿ, ಎ.ಕೆ. ಸಿದ್ದಲಿಂಗಪ್ಪನವರ ಮೂಲ ವೇತನವನ್ನು 20,100/- ರೂ.ಗಳಿಗೆ ನಿಗದಿಪಡಿಸಿ, ಅವರ ದರ್ಜೆಯನ್ನು ಶ್ರೇಣಿಯನ್ನು ಈ ಮೂಲಕ ತಕ್ಷಣವೇ ಜಾರಿಗೆ

ಬರುವಂತೆ ಎಂಎಂಜಿಎಸ್-II ರಿಂದ ಜೆಎಂಜಿಎಸ್ -1 ಕ್ಕೆ ಇಳಿಸಲಾಗಿದೆ. "

ಮತ್ತು ದಂಡನಾ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ಅಪೀಲನ್ನು ಸಹ,ದಿನಾಂಕ: 04.09.2014 ರ ಆದೇಶದ ಮೂಲಕ, ಹಾಗೆಯೇ ಪರಿಷ್ಕರಣಾ ಅರ್ಜಿಯನ್ನುದಿನಾಂಕ: 10.11.2014 ರ ಆದೇಶದ ಮೂಲಕ ಅಪೀಲು ಪ್ರಾಧಿಕಾರವು ತಳ್ಳಿಹಾಕಿದೆ.ಇದು ಅರ್ಜಿದಾರನಿಗೆ ಅಂತಿಮ ಆಘಾತವಾಗಿದೆ.ಅರ್ಜಿದಾರನು ಎಂದಿಗೂ ತನ್ನನ್ನು ಇಲಾಖೆಯ ವಿರುದ್ಧ ವ್ಯವಹರಣೆಗೊಳಪಡಿಸಬಾರದೆಂದು ದೂರಿಲ್ಲವೆಂಬುದನ್ನು ಗಮನಿಸಬೇಕು.ಆದರೆ, ಶಿಸ್ತು ವ್ಯವಹರಣೆಗಳಲ್ಲಿ, ತಾನು ಶೇಕಡ 98 ರಷ್ಟು ಶ್ರವಣ ದೋಷ ಹೊಂದಿರುವ ಕಾರಣ ಪ್ರತಿವಾದದ ಸೂಕ್ತ ಅವಕಾಶವನ್ನು ನೀಡಬೇಕೆ ೦ ಬುದು ಆತನ ವಾದವಾಗಿತ್ತು.

17. ಶ್ರವಣ ದೋಷ ಹೊಂದಿದ ವ್ಯಕ್ತಿಗಳೆಂದರೆ, ಜೀವನದ ಸಾಮಾನ್ಯ ಉದ್ದೇಶಗಳಿಗೆ ಅವರಲ್ಲಿ ಶ್ರವಣೇಂದ್ರಿಯ ಕಾರ್ಯನಿರ್ವಹಿಸುತ್ತಿರುವುದಿಲ್ಲ.ಅವರು ಶಬ್ದವನ್ನು ಧ್ವನಿವರ್ಧಿತ ಮಾತುಗಳಿಂದ ಸಹ ಆಲಿಸಲಾಗುವುದಿಲ್ಲ.ಅರ್ಥ ಮಾಡಿಕೊಳ್ಳಲಾಗುವುದಿಲ್ಲ.ವೈದ್ಯಕೀಯ ಮಾನದಂಡಗಳಲ್ಲಿ, ಶೇಕಡ 60 ಮತ್ತು 90 ರ ನಡುವಿನ ಶ್ರವಣ ದೋಷವನ್ನು ತೀವ್ರತರ ದೋಷವೆಂದು ಹೇಳಲಾಗುತ್ತದೆ, ಇದರಲ್ಲಿ ಎರಡೂ ಕಿವಿಗಳಲ್ಲಿ ಒಟ್ಟಾರೆ ಶ್ರವಣ ನಷ್ಟವುಂಟಾಗಿರುತ್ತದೆ.ವೈದ್ಯಕೀಯ ಮಾನದಂಡಗಳು ತೀವ ದೋಷವೆಂದು ಘೋಷಿಸಿರುವುದಕ್ಕಿಂತ ಹೆಚ್ಚಾಗಿ, ಅರ್ಜಿದಾರನು ಶೇಕಡ 98 ರಷ್ಟು ಶಬ್ದಕ್ಕೆ ಶ್ರವಣ ದೋಷ ಹೊಂದಿದ್ದಾನೆಂಬುದು ವಿವಾದವಾಗಿಲ್ಲ.ಆದುದರಿಂದ, ಯಾವುದೇ ರೀತಿಯ ಅಸಮರ್ಥತೆ ಹೊಂದಿರುವ ಅಂಥ ನೌಕರರು ವಿಶಿಷ್ಟ ಸಾಮರ್ಥ್ಯವುಳ್ಳ ವ್ಯಕ್ತಿಗಳಾಗಿರುವುದರಿಂದ, ಅವರನ್ನು ವಿಶಿಷ್ಟವಾಗಿ ಪರಿಗಣಿಸಲು ಯಾರೇ ನಿಯೋಜಕನು ನೈತಿಕವಾಗಿ ಮತ್ತು ಕಾನೂನು ಪ್ರಕಾರವಾಗಿ ಬದ್ಧನಾಗಿರುತ್ತಾನೆ.ಅಂಥ ಶ್ರವಣ ದೋಷ ಹೊಂದಿರುವ ನೌಕರರ ಈ ಹಕ್ಕು, ವಿವಿಧ ಅಂತರಾಷ್ಟ್ರೀಯ ಒಪ್ಪಂದಗಳಿಂದ ಮಾತ್ರವಲ್ಲದೆ, ನಮ್ಮ ಸಾಂವಿಧಾನಿಕ ಚೌಕಟ್ಟಿನಲ್ಲೂ ಸಹ ಗುರುತಿಸಿರುವ ಹಕ್ಕಾಗಿದೆ.ಅಸಮರ್ಥತೆಗಳಿರುವ ವ್ಯಕ್ತಿಗಳು, ಸಾಮಾಜಿಕ ಅಡೆತಡೆಗಳು ಮತ್ತು ನಿಯೋಜನೆಯಲ್ಲಿ ಎದುರಿಸುವ ತಾರತಮ್ಯದ ಕಾರಣದಿಂದ ಅವರು ಜೀವನ ನಡೆಸಲು ಅಸಮರ್ಥರಾಗುವುದು ಸಾಮಾನ್ಯ ಅನುಭವ.ಅವರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಮಿಳಿತಗೊಳಿಸುವ ಅರ್ಥಪೂರ್ಣ ಪ್ರಯತ್ನಗಳು ವಿರಳ.ಸದರಿ ತತ್ವಗಳೊಂದಿಗೆ ಅರ್ಜಿದಾರನ ವಿರುದ್ಧ ಹೂಡಿದ ಮತ್ತು ನಡೆಸಿದ ವ್ಯವಹರಣೆಗಳು ಆತನ ಅಸಮರ್ಥತೆಯನ್ನು ಗಮನಿಸಲಾಗಿತ್ತು ಎನ್ನುವಷ್ಟರಮಟ್ಟಿಗೆ, ನಿಯೋಜಕನು ಪ್ರತಿವಾದದ ಸೂಕ್ತ ಅವಕಾಶವನ್ನು ಆತನಿಗೆ ಒದಗಿಸಿಲ್ಲ ಎಂದು ಸಂದೇಹಕ್ಕೆ ಆಸ್ಪದವಿಲ್ಲದಂತೆ ನಿರ್ಣಯಿಸಬಹುದಾಗಿದೆ.ವ್ಯವಹರಣೆಗಳ ಪ್ರತಿಯೊಂದು ಹಂತದಲ್ಲಿ, ಅರ್ಜಿದಾರನನ್ನು ಅಸಮರ್ಥತೆ ಇರದ ಸಾಮಾನ್ಯ ನೌಕರನೆಂಬಂತೆ ಪರಿಗಣಿಸಲಾಗಿದೆ.

18. ಆದುದರಿಂದ, ವಿಚಾರಣೆಯಲ್ಲಿ ಸ್ವತಃ ತನ್ನನ್ನು ರಕ್ಷಿಸಿಕೊಳ್ಳುವುದು ಎಂದರೆ ಪ್ರತಿವಾದದ ನೆರವನ್ನು ಒದಗಿಸುವುದು ಎಂದು ಸಹ ಅರ್ಥವಾದರೂ, ಹಾಗೆ ಮಾಡಲು ಎಲ್ಲಾ ಅವಕಾಶಗಳನ್ನು ಅರ್ಜಿದಾರನಿಗೆ ನೀಡಬೇಕಿತ್ತು ಎಂದು ಅದರ ಅರ್ಥ. ಅರ್ಜಿದಾರನ ಸ್ಥಾನದಲ್ಲಿರುವ ಒಬ್ಬ ನೌಕರನು, ಆತನು ಶ್ರವಣ ಅಸಮರ್ಥತೆಯಿಂದ ಬಳಲುತ್ತಿದ್ದುದ್ದರಿಂದ, ಆತನ ಅಹವಾಲನ್ನು ಆಲಿಸದೆ ಖಂಡಿಸುವುದನ್ನು ನೋಡಲಾಗುವುದಿಲ್ಲ ಮತ್ತು ಪ್ರಶ್ನಿತ ವ್ಯವಹರಣೆಗಳಲ್ಲಿ, ಸಂಶಯಾತೀತವಾಗಿ ಅಹವಾಲು ಆಲಿಸದೆ ಆರೋಪ ಸ್ಥಿರೀಕರಿಸಿರುವುದಿಲ್ಲ.

19. ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 15 ನೇ ನಿಯಮದ 32 ನೇ ಕ್ರಮಾದೇಶದ ಮಾನದಂಡಗಳ ಅಡಿಯಲ್ಲಿ, ಈ ಉಪಬಂಧವು ಮಾನಸಿಕ ಅಸ್ಥಿರತೆ ಕುರಿತು ವ್ಯವಹರಿಸುತ್ತದೆಯಾದರೂ, ಈ ತತ್ವವನ್ನು ವಿಶದೀಕರಿಸುವಾಗ ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, 32 ನೇ ಕ್ರಮಾದೇಶ 15 ನೇ ನಿಯಮದ ಚ ಸಂದರ್ಭದಲ್ಲಿ ಮಾನಸಿಕ ಅಸ್ಥಿರತೆಯು, ಕಿವುಡುತನ ಅಥವಾ ಮೂಕತನದಂಥ ದೈಹಿಕ ದೋಷಗಳನ್ನು ಒಳಗೊಳ್ಳುತ್ತದೆ

ಎಂದು ಅಭಿಪ್ರಾಯಪಟ್ಟಿದ್ದು, ಹಾಗೆ ಹೇಳುವಾಗ, ಕಿವುಡ ಅಥವಾ ಮೂಕ ವ್ಯಕ್ತಿಯು ತನ್ನ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾನೆಯೇ ಎಂಬುದಕ್ಕೆ ವಿಚಾರಣೆ ನಡೆಸಲು ನ್ಯಾಯಾಲಯವು

ಬದ್ಧವಾಗಿರುತ್ತದೆ ಎಂದು ಸಹ ಅಭಿಪ್ರಾಯಪಟ್ಟಿದೆ.ವರದಿಯಾದ ರವೀಂದ್ರನ್ ವಿರುದ್ಧ-ಶೋಭನ ಮತ್ತು ಇನ್ನೊಬ್ಬರು (ಮೇಲಿನಂತೆ) ಮೊಕದ್ದಮೆಯಲ್ಲಿನ ಸುಸಂಗತ ಕಂಡಿಕೆಗಳನ್ನು ಸಿದ್ಧ ಪರಾಮರ್ಶನೆಗಾಗಿ ಈ ಕೆಳಗಿನಂತೆ ಉದ್ಧರಿಸಲಾಗಿದೆ:

"10. 32 ನೇ ಕ್ರಮಾದೇಶ 15 ನೇ ನಿಯಮದ ಅಡಿಯಲ್ಲಿನ ನಿರ್ಣಯವು, ತನ್ನ ಸ್ವಂತ ವ್ಯಾಜ್ಯವನ್ನು ನಡೆಸುವ ಪಕ್ಷಕಾರನ ಹಕ್ಕುಗಳನ್ನು ಕಸಿದುಕೊಳ್ಳುತ್ತದೆಯಾದ್ದರಿಂದ, ಮತ್ತು ಆತನ ಮೇಲೆ ಪಾಲಕತ್ವವನ್ನು ಹೇರಲಾಗುತ್ತದೆಯಾದ್ದರಿಂದ, ಅದು ಅತ್ಯಂತ ಗಂಭೀರ ಪರಿಣಾಮಗಳನ್ನು ಒಳಗೊಂಡಿರುತ್ತದೆ.ಇಂಥ ಸಂದರ್ಭಗಳಲ್ಲಿ, ನ್ಯಾಯಾಲಯವು ನೈಜ ಸಲಹೆಗಾರನ ನೇಮಕಾತಿಯ ಅಗತ್ಯವನ್ನು ವಿಚಾರಿಸುವ ನಿರ್ಬಂಧಕ ಅಧಿಕಾರವ್ಯಾಪ್ತಿಯನ್ನಷ್ಟೇ ಅಲ್ಲದೆ, ವಾಸ್ತವವಾಗಿ ಅದು ತನ್ನ ಮುಂದೆ ಹಾಜರಾಗುವ ಅಸ್ವಸ್ಥ ಚಿತ್ರ ಅಥವಾ ಮಾನಸಿಕ ಅಸ್ಥಿರತೆಯನ್ನು ಹೊಂದಿರುವ ವ್ಯಕ್ತಿಯು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಮರ್ಥನಾಗಿರುವನೇ ಎಂಬುದನ್ನು ಪರಿಶೀಲಿಸುವ ಬಾಧ್ಯತೆಯನ್ನು ಸಹ ಹೊಂದಿರುತ್ತದೆ.ಆ ವ್ಯಕ್ತಿಯು ಸ್ವತಃ ತನ್ನ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿರದೆ ಇದ್ದರೆ, ನ್ಯಾಯಾಲಯವು, ನೈಜ ಸಲಹೆಗಾರನನ್ನು ನೇಮಕ ಮಾಡುವ ಮೂಲಕ ಆತನ ಹಿತಾಸಕ್ತಿಗಳನ್ನು ಕಾಪಾಡುವ ಬಾಧ್ಯತೆಯನ್ನು ಹೊಂದಿದೆ ಮತ್ತು ಅಂತಹ ವ್ಯಕ್ತಿಯು ತನ್ನ ಸ್ವಂತ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದರೆ, ನ್ಯಾಯಾಲಯವು ನೈಜ ಸಲಹೆಗಾರನನ್ನು ಅಥವಾ ಪಾಲಕನನ್ನು ಆತನ ಮೇಲೆ ಬಲವಂತವಾಗಿ ಹೇರುವ, ಆ ಮೂಲಕ ತನ್ನ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಆತನ ಹಕ್ಕಿನಿಂದ ವಂಚಿತಗೊಳಿಸದಂತೆ ನೋಡುವ ಬಾಧ್ಯತೆಯನ್ನು ಸಹ ಹೊಂದಿದೆ.ಹಾಗಾಗಿ, ಎಸ್.ಸಿ. ಕರಯಾಲರ್ ವಿ. -ವಿರುದ್ಧ-ವಿ.ಕರಯಾಲರ್ (1968 ( 2) ಎಂಎಲ್ಜೆ 150):(ಎಐಆರ್ 1968 ಎಂಎಡಿ 346) ಮೊಕದ್ದಮೆಯಲ್ಲಿ, 15 ನೇ ನಿಯಮದ 32 ನೇ ಕ್ರಮಾದೇಶದ ಅಡಿಯಲ್ಲಿ ವಿಚಾರಣೆ ನಡೆಸುವುದು, " 1 ತಪ್ಪಿಸಿಕೊಳ್ಳಲಾದದ್ದಾಗಿದೆ ಮತ್ತು ನ್ಯಾಯಾಲಯವು ಪಾಲಕನನ್ನು ಅಥವಾ ನೈಜ ಸಲಹೆಗಾರನನ್ನು ಅವನ ಮೇಲೆ ಹೇರುವ ಮೂಲಕ, ತನ್ನ ದಾವೆಯನ್ನು ನಡೆಸುವ ವ್ಯಾಜ್ಯಕಾರನ ಹಕ್ಕನ್ನು ಬಿಟ್ಟು ಕೊಡುವ ಅಥವಾ ತ್ಯಜಿಸುವ ಸಮ್ಮತಿಯು, ನ್ಯಾಯಾಲಯದಲ್ಲಿ ಅಧಿಕಾರವ್ಯಾಪ್ತಿಯನ್ನು ನಿಹಿತಗೊಳಿಸಿದಂತಾಗುವುದಿಲ್ಲ." ಎಂದು ನಿರ್ಣಯಿಸಿಸಲಾಗಿತ್ತು.

11. ಹಾಗಾಗಿ, 15 ನೇ ನಿಯಮದ 32 ನೇ ಕ್ರಮಾದೇಶದ ಸಂದರ್ಭದಲ್ಲಿ, ಮಾನಸಿಕ ಅಸ್ಥಿರತೆಯು ಮಾನಸಿಕ ಅಸ್ವಸ್ಥತೆ, ಮನೋವಿಕಲತೆ ಅಥವಾ ಮಾನಸಿಕ ಅನಾರೋಗ್ಯವಲ್ಲವೆಂಬುದು ಕಾನೂನಿನ ನಿಲುವಾಗಿದೆ.ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ವ್ಯಕ್ತಿಯನ್ನು ಅಸಮರ್ಥವನ್ನಾಗಿಸುವ ಯಾವುದೇ ಕಾರಣದಿಂದಾದ ಮನಸಿನ ದೌರ್ಬಲ್ಯವು, 15 ನೇ ನಿಯಮದ 32 ನೇ ಕ್ರಮಾದೇಶದ ಅಡಿಯಲ್ಲಿ ರಕ್ಷಣಾತ್ಮಕ ಆಶ್ರಯವನ್ನು ವ್ಯಕ್ತಪಡಿಸಲು ಪರಾಪ್ತವಾಗಿದೆ.ಅಂಥ ಅಸ್ಥಿರತೆಯು, ಕಿವುಡುತನ ಅಥವಾ ಮೂಕತನದಂಥ ದೈಹಿಕ ದೋಷಗಳಿಂದಲೂ ಉಂಟಾಗಬಹುದಾಗಿದ್ದು, ಆ ಮೂಲಕ ತನ್ನ ಇಚ್ಛೆಗಳನ್ನು, ಅಭಿಪ್ರಾಯಗಳನ್ನು ಅಥವಾ ಆಲೋಚನೆಗಳನ್ನು ತನಗೆ ಪರಿಚಿತರಿರದ ಇತರರಿಗೆ ತಿಳಿಸಲು ವ್ಯಕ್ತಿಯನ್ನು ಅಸಮರ್ಥನನ್ನಾಗಿಸುತ್ತದೆ.ಅಂಥ ವ್ಯಕ್ತಿಯು ವಾದಿಯಾಗಿಯಾಗಲಿ ಅಥವಾ ಪ್ರತಿವಾದಿಯಾಗಿಯಾಗಲಿ ದಾವೆ ಅಥವಾ ವ್ಯವಹರಣೆಗಳಲ್ಲಿ ನ್ಯಾಯಾಲಯದ ಮುಂದಿದ್ದರೆ, ತನ್ನ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ಆ ವ್ಯಕ್ತಿಯು ಹೊಂದಿರುವನೇ ಎಂಬುದನ್ನು ತಿಳಿದುಕೊಳ್ಳಲು ವಿಚಾರಣೆ ನಡೆಸುವ ಬಾಧ್ಯತೆ ನ್ಯಾಯಾಲಯಕ್ಕಿರುತ್ತದೆ.ಅವಶ್ಯವಿದ್ದರೆ ಮತ್ತು ಅಗತ್ಯವಿದ್ದರೆ, ತಜ್ಞರ ನೆರವಿನೊಂದಿಗಿನ ನ್ಯಾಯಿಕ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ದಾವೆ ಅಥವಾ ವ್ಯವಹರಣೆಗಳಲ್ಲಿ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಅಂಥ ವ್ಯಕ್ತಿಯು ಅಸಮರ್ಥನಾಗಿರುವನು ಎಂದು ಕಂಡುಬಂದರೆ, ಅಂಥ ವ್ಯಕ್ತಿಗೆ ನೈಜ ಸಲಹೆಗಾರನನ್ನು ನೇಮಕ ಮಾಡುವ ಬಾಧ್ಯತೆಯನ್ನು ನ್ಯಾಯಾಲಯವು ಹೊಂದಿರುತ್ತದೆ, ಮತ್ತು ಇನ್ನೊಂದೆಡೆ ಅನ್ಯಥಾ ಆ ವ್ಯಕ್ತಿಯು ನೈಜ ಸಲಹೆಗಾರನ ನೆರವಿಲ್ಲದೆ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿರುವನೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ಈಗಾಗಲೇ ನೈಜ ಸಲಹೆಗಾರನು ಲಭ್ಯನಿದ್ದರೆ, ನ್ಯಾಯಾಲಯವು ಆತನನ್ನು ತೆಗೆದುಹಾಕತಕ್ಕದ್ದು ಮತ್ತು ಮಾನಸಿಕ ಅಸ್ವಸ್ಥನಾಗಿರುವನೆಂದು ಅಥವಾ ಮಾನಸಿಕ ಅಸ್ಥಿರತೆಯಿಂದ ಬಳಲುತ್ತಿರುವನೆಂದು ಆರೋಪಿತವಾಗಿರುವ ವ್ಯಕ್ತಿಗೆ ಸ್ವತಃ ವ್ಯಾಜ್ಯ ನಡೆಸಲು ಅನುಮತಿ ನೀಡತಕ್ಕದ್ದು.ರಾಮಚಂದ್ರ -ವಿರುದ್ಧ ಮಾನ್ಸಿಂಗ್ (ಎಐಆರ್ 1968 ಎಸ್ 954)

ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಪಾಲಕನನ್ನು ನೇಮಿಸದೆ ಅಪ್ರಾಪ್ತನ ವಿರುದ್ಧ ಹೊರಡಿಸಿದ ಡಿಕ್ಕಿಯು ಶೂನ್ಯವಾಗುವುದು.15 ನೇ ನಿಯಮದ 32 ನೇ ಕ್ರಮಾದೇಶದಲ್ಲಿ ಉಲ್ಲೇಖಿಸಿದಂತೆ ಮಾನಸಿಕ ಅಸ್ವಸ್ಥತೆ ಅಥವಾ ಮಾನಸಿಕ ಅಸ್ಥಿರತೆಯಿಂದ ಬಳಲುತ್ತಿರುವ ವ್ಯಕ್ತಿಗೆ ಸಂಬಂಧಪಡುವಷ್ಟರಮಟ್ಟಿಗೆ ಇದೇ ತತ್ವ ಅನ್ವಯವಾಗುವುದು.

12. ಪ್ರಸ್ತುತ ಮೊಕದ್ದಮೆಯಲ್ಲಿ, ಕುಟುಂಬ ನ್ಯಾಯಾಲಯವು, ವಾಸ್ತವವಾಗಿ ಎಂ.ಸಿ. 231/99 ರಲ್ಲಿನ ಆದೇಶದ ಘೋಷಣೆಗಾಗಿ ಹೂಡಿದ ದಾವೆಯ ಸಮರ್ಥನೀಯತೆಗೆ ಸಂಬಂಧಿಸಿದ ವಿಷಯವನ್ನು ಶೂನ್ಯ ಮತ್ತು ಅಸಿಂಧುವೆಂದು ರೂಪಿಸಿದೆ.ಒಪ್ಪಿಕೊಂಡಿರುವಂತೆ ಅರ್ಜಿದಾರನು ಕಿವುಡ ಮತ್ತು ಮೂಕ ವ್ಯಕ್ತಿಯಾಗಿರುವುದರಿಂದ, 15 ನೇ ನಿಯಮದ 32 ನೇ ಕ್ರಮಾದೇಶದ ಅಡಿಯಲ್ಲಿ ವಿಚಾರಣೆ ನಡೆಸದೆ ನ್ಯಾಯಾಲಯವು ಮೊಕದ್ದ ಮೆಂತನ್ನು ಧ ಮುಂದುವರಿಸುವಂತಿರಲಿಲ್ಲ.ವಿಚಾರಣೆಯ ಫಲಶ್ರುತಿಯನ್ನಾಧರಿಸಿ, ಪಂಕಜಾಕ್ಷ ಕರುಪ್ (ಎಐಆರ್ 1998 ಕೆಇಆರ್ 153) (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠದ ನಿರ್ಣಯದ ಹಿನ್ನೆಲೆಯಲ್ಲಿ ಅಥವಾ ಲಕ್ಷ್ಮೀ ಪಿಳ್ಳೆ ಇತ ಪಾರ್ವತಿ ಪಿಳ್ಳೆ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಪೀಠದ ನಿರ್ಣಯದ ಹಿನ್ನೆಲೆಯಲ್ಲಿ ವಿಷಯವನ್ನು ಮತ್ತಷ್ಟು ಪರಿಗಣಿಸಬೇಕಾಗುವುದು.ಒ.ಪಿ. 847/2000 ದಲ್ಲಿನದಿನಾಂಕ: 16.05.2006 ರ ಆದೇಶವನ್ನು ನಾವು ತಳ್ಳಿ ಹಾಕುತ್ತೇವೆ ಮತ್ತು ತ್ರಿಶೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ವಿಷಯವನ್ನು ಮರಳಿ ಕಳುಹಿಸುತ್ತಿದ್ದೇವೆ.ಕೌಟುಂಬಿಕ ನ್ಯಾಯಾಲಯವು ಒ.ಪಿ. 847/2000 ವನ್ನು ಕಾನೂನಿನಗನುಸಾರವಾಗಿ ಪರಿಗಣಿಸಿ, ತ್ವರಿತವಾಗಿ ಅದನ್ನು ವಿಲೇ ಮಾಡತಕ್ಕದ್ದು. "

(ಒತ್ತು ನೀಡಲಾಗಿದೆ)

ಕಿವುಡುತನ ಮತ್ತು ಮೂಕತನವನ್ನು ಮಾನಸಿಕ ಅಸ್ಥಿರತೆಯ ಪರಿಧಿಯೊಳಗೆ ತಂದು ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ವಿಧಿಸಿದ ನಿಯಮದ ಚ ಹಿನ್ನೆಲೆಯಲ್ಲಿ, ಪ್ರಸ್ತುತ ಮೊಕದ್ದಮೆಯನ್ನು ನೋಡಲಾಗಿದ್ದು, ವಿಧಿಸಲಾದ ದಂಡನೆಯು ಅಸಮರ್ಥನೀಯವಾಗುತ್ತದೆ.

20. ಇಲಾಖಾ ವಿಚಾರಣೆಯನ್ನು ಎದುರಿಸುವ ನೌಕರನಿಗೆ, ವಿಚಾರಣೆಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ನಾಲಿಗೆ ಕಟ್ಟಿದಂತಾಗುತ್ತದೆ.ಆದುದರಿಂದ, ಸಾಮಾನ್ಯ ನೌಕರನು ಇಲಾಖಾ ವಿಚಾರಣೆಯನ್ನು ಎದುರಿಸುತ್ತಿದ್ದರೆ ನಾಲಿಗೆ ಕಟ್ಟಿದಂತಾಗುವಾಗ, ಇನ್ನು ಶೇಕಡ 98 ರಷ್ಟು ಶ್ರವಣ ದೋಷವುಳ್ಳ ಅರ್ಜಿದಾರನು ಸಹ ನಿರ್ವಿವಾದವಾಗಿ, ಯಾವುದೇ ಪ್ರತಿವಾದ ಮಂಡಿಸಲು ಅಸಮರ್ಥನಾಗುತ್ತಾನೆ.ಬ್ಯಾಂಕ್ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪುಗಳಷ್ಟರಮಟ್ಟಿಗೆ ಹೇಳುವುದಾದರೆ, ಅವು ಸರ್ವೋಚ್ಚ ನ್ಯಾಯಾಲಯದ ಮುಂದೆ ಲಭ್ಯವಿದ್ದ ಸಂಗತಿಗಳ ಆಧಾರದ ಮೇಲೆ ಮತ್ತು ಇಲಾಖಾ ವ್ಯವಹರಣೆಗಳ ನ್ಯಾಯಿಕ ಪುನರ್ಪರಿಶೀಲನೆಯ ತತ್ವದ ಹಾಗೂ ದಂಡವನ್ನು ವಿಧಿಸಿದ್ದರ ಆಧಾರದ ಮೇಲೆ ತೀರ್ಪು ನೀಡಿದ ಮೊಕದ್ದಮೆಗಳಾಗಿವೆ.ಇವೆಲ್ಲಕ್ಕಿಂತ ಮಿಗಿಲಾಗಿ, ಅವುಗಳೆಲ್ಲಾ ಸಾಮಾನ್ಯ ನೌಕರರಿಗೆ ಸಂಬಂಧಪಟ್ಟ ಮೊಕದ್ದಮೆಗಳಾಗಿವೆ.ಆದುದರಿಂದ, ಇದರಲ್ಲಿನ ಅರ್ಜಿದಾರನನ್ನು, ಬ್ಯಾಂಕಿನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಅವಲಂಬಿಸಿದ ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ವಗಳ ಅನ್ವಯತೆಗಾಗಿ ಸಾಮಾನ್ಯ ನೌಕರನೆಂಬುದಾಗಿ ಅರ್ಥೈಸಲಾಗುವುದಿಲ್ಲವಾದ್ದರಿಂದ, ಆ ಕೂಡಲೇ ಪ್ರಸ್ತುತ ಮೊಕದ್ದಮೆಯ ಸಂಗತಿಗಳ ಆಧಾರದ ಮೇಲೆ ಸದರಿ ಮೊಕದ್ದಮೆಗಳು ವಿಭಿನ್ನವಾದವುಗಳಾಗಿವೆ.

21. ದುರ್ವ್ಯವಹಾರವು 2011 ನೇ ಸಾಲಿಗೆ ಸಂಬಂಧಿಸಿದ್ದಾಗಿದ್ದು, ಹತ್ತು ವರ್ಷಗಳು ಕಳೆದು ಹೋಗಿವೆ; ವಯೋನಿವೃತ್ತಿ ವಯಸ್ಸನ್ನು ತಲುಪಿದ ನಂತರ ಅರ್ಜಿದಾರನು ನಿವೃತ್ತನಾಗಿದ್ದಾನೆ; ಎಲ್ಲಕ್ಕಿಂತ ಹೆಚ್ಚಾಗಿ, ಅರ್ಜಿದಾರನ ಅಸಮರ್ಥತೆಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು ಎಂಬ ಕಾರಣಕ್ಕಾಗಿ ವಿಷಯವನ್ನು ಶಿಸ್ತು ಪ್ರಾಧಿಕಾರಕ್ಕೆ ಹಿಂತಿರುಗಿಸಲು ಬ್ಯಾಂಕಿನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಮಾಡಿಕೊಂಡ ನಿವೇದನೆಯನ್ನು ಸಹ ಒಪ್ಪಿಕೊಳ್ಳಲಾಗುವುದಿಲ್ಲ.ಇಲ್ಲಿ ಮೇಲೆ ಸೂಚಿಸಿದಂತೆ ಬ್ಯಾಂಕಿನ ಅವಿವೇಕತನಕ್ಕಾಗಿ, ಈ ಹಂತದಲ್ಲಿ ವಸ್ತುವಿಷಯವಾದ ಆರೋಪ ಪಟ್ಟಿಯ ರೂಪದಲ್ಲಿ ಶಿಸ್ತು ವ್ಯವಹರಣೆಗಳನ್ನು ಅವು ಹೇಗೇ ಇದ್ದರೂ, ಅವುಗಳನ್ನು ಮುಂದುವರಿಸುವ ಮತ್ತೊಂದು ಅಸಂಬದ್ಧ ಪ್ರಲಾಪಕ್ಕೆ ಅರ್ಜಿದಾರನ ಜೀವನವನ್ನು ಗುರಿ ಮಾಡಲಾಗುವುದಿಲ್ಲ.

22. ಮೇಲೆ ಹೇಳಿದ ಕಾರಣಗಳಿಗಾಗಿ, ನನ್ನ ಪರಿಗಣಿತ ಅಭಿಪ್ರಾಯದಲ್ಲಿ, ಪ್ರತಿವಾದಿ-ಬ್ಯಾಂಕಿನ ಕ್ರಮವನ್ನು ಸಹಜ ನ್ಯಾಯ ತತ್ವಗಳನ್ನು ಬ್ಯಾಂಕು ಉಲ್ಲಂಘಿಸಿದೆ ಎಂದು ಹೇಳಲಾಗುವುದಿಲ್ಲವಾದರೂ, ಕಾನೂನಿಗೆ ಅನುಗುಣವಾಗಿ ಅರ್ಜಿದಾರನಿಗೆ ತನ್ನ ಪರ ಪ್ರತಿವಾದಿಸಲು ಅನುಮತಿ ನೀಡದೆ ದಂಡನೆ ವಿಧಿಸಿದೆ.ಇದು ಬ್ಯಾಂಕಿನ ಹಕ್ಕುಗಳ ಉಲ್ಲಂಘನೆಯಲ್ಲ, ಇದು ಕಾನೂನು ಹಕ್ಕಿನ ಉಲ್ಲಂಘನೆಯೂ ಅಲ್ಲ, " ಇದು ಅರ್ಜಿದಾರನ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ".

23. ಮೇಲಿನ ಪ್ರಮುಖ ಕಾರಣಗಳಿಗಾಗಿ ಈ ಮುಂದಿನ ಆದೇಶ:

ಆಜ್ಞೆ

ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಬಿ. ಶಿಸ್ತು ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ಪುನರವಲೋಕನ ಪ್ರಾಧಿಕಾರಗಳು ಹೊರಡಿಸಿದದಿನಾಂಕ: 31.01.2014,ದಿನಾಂಕ: 04.09.2014 ಮತ್ತುದಿನಾಂಕ: 19.11.2014 ರ ಆದೇಶಗಳನ್ನೆಲ್ಲಾ ರದ್ದುಗೊಳಿಸಲಾಗಿದೆ.

ಸಿ. ಮೇಲೆ ಹೇಳಿದ ಆದೇಶಗಳನ್ನು ರದ್ದುಗೊಳಿಸಿದ್ದರಿಂದ, ವೇತನದಲ್ಲಿನ ವ್ಯತ್ಯಾಸ ಮತ್ತು ಪಿಂಚಣಿಯಲ್ಲಿನ ವ್ಯತ್ಯಾಸವನ್ನು ಒಳಗೊಂಡು ಎಲ್ಲಾ ತತ್ಪರಿಣಾಮದ ಪ್ರಯೋಜನಗಳಿಗೆ ಅರ್ಜಿದಾರನು ಹಕ್ಕುಳ್ಳವನಾಗಿರುವನು.

ಅರ್ಜಿದಾರನ ಪಿಂಚಣಿಯನ್ನು ಬ್ಯಾಂಕು ಪುನಃ ಲೆಕ್ಕಹಾಕಿ, ಪಿಂಚಣಿಯಲ್ಲಿನ ವ್ಯತ್ಯಾಸವನ್ನು ಆತನಿಗೆ ಸಂದಾಯ ಮಾಡತಕ್ಕದ್ದು.

ಇ. ಕಾಲ್ಪನಿಕವಾಗಿಯಾದರೂ, ಮೇಲೆ ಹೇಳಿದ ವ್ಯವಹರಣೆಗಳ ಬಾಕಿಯ ಕಾರಣದಿಂದ ಅಲ್ಲಗಳೆಯಲಾಗಿರುವ ಯಾವುದೇ ಮುಂಬಡ್ತಿಗೆ ಸಹ ಅರ್ಜಿದಾರನು ಹಕ್ಕುಳ್ಳವನಾಗಿರತಕ್ಕದ್ದು.

ಎಫ್. ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಬ್ಯಾಂಕು ಮೇಲೆ ಹೇಳಿದ ನಿರ್ದೇಶನಗಳನ್ನು ಪಾಲಿಸತಕ್ಕದ್ದು.